www.divinegen.org
www.dgmbethelchurch.org

# ದೇವರ ಸ್ವರ

ದೇವ ಜನರಿಂದ ... ದೇವ ಜನರಿಗಾಗಿ

ಸಂಪುಟ–09 ಸಂಚಿಕೆ–05 ಮೇ 2015
Volume : IX Issue : 05 May 2015

Editor, Publisher, Printer
& Owned by :
**Sunil John D'souza**
S/o. Late Joseph D'souza
Bethel Faith Home
Yesupura, Innanje Village,
Shankarpura, **Udupi**


Printed at :
**Prakash Offset Printers,**
Plot No. 164, Industrial Area,
Baikampady,
**Mangalore - 575003.**

Published at :
**Divine Generation Ministries**
Bethel Church Trust,
Bethel Church Road,
Yesupura, Innanje Village,
Shankarpura Post,
Udupi - 574 115.

ಒಳ ಪುಟಗಳಲ್ಲಿ

1. ಪ್ರಕಟಣೆ
2. ಪ್ರಾರ್ಥನಾ ಮನವಿಗಳು
3. ಶಿರಸ್ಸಿನ ಮೇಲೆ ಬರುವ 5 ಆಶೀರ್ವಾದಗಳು !
4. ಆರೋಗ್ಯ ಸ್ವರ
5. ಡಿಜಿಎಮ್ ಬೇತೇಲ್ ಅಂಕಣ
6. ನೀತಿವಂತನ ಆಶೀರ್ವಾದಗಳು
7. ಸ್ಥಳೀಯ ಮತ್ತು ವಿದೇಶ ಸುದ್ದಿ
8. ವಿಶ್ವಾಸದಮನೆಗೆ ಭೇಟಿ ನೀಡಿದವರ ಅನಿಸಿಕೆಗಳು :
9. ಅವಿಧೇಯತೆ
10. ಮಹಿಳೆಯರ ಸ್ವರ
11. ಮಕ್ಕಳ ಸ್ವರ

## ಸಂಪಾದಕರ ಲೇಖನಿಯಿಂದ . . .



ಕರ್ತನಾದ ಯೇಸುಕ್ರಿಸ್ತನ ಮಧುರವಾದ ನಾಮದಲ್ಲಿ ಕ್ರಿಸ್ತನಲ್ಲಿ ಪ್ರೀತಿಯ ಸಹೋದರ/ಸಹೋದರಿಯರಿಗೆ ನನ್ನ ವಂದನೆಗಳು.

ಕಳೆದ ಪ್ರತಿಯೊಂದು ವರುಷಗಳಲ್ಲಿ, ತಿಂಗಳುಗಳಲ್ಲಿ, ದಿವಸಗಳಲ್ಲಿ ಕರ್ತನು ನಮ್ಮ ಜೊತೆಯಿದ್ದು ಅದ್ಭುತವಾಗಿ ನಡೆಸಿರುತ್ತಾನೆ. ಆತನ ಪ್ರೀತಿಯು ಶಾಶ್ವತವಾದದ್ದು. "ನಾನು ನಿನ್ನನ್ನು ಪ್ರೀತಿಸಿರುವದು ಶಾಶ್ವತ ಪ್ರೇಮದಿಂದಲೇ; ಆದಕಾರಣ ನಿನ್ನನ್ನು ಮಮತೆಯಿಂದ ಸೆಳೆದುಕೊಂಡಿದ್ದೇನೆ" (ಯೆರೆ. 31:3). ಈ ಲೋಕದ ಮನುಷ್ಯನ ಪ್ರೀತಿಯು ತಾತ್ಕಲಿಕವಾದದ್ದು ಮತ್ತು ಸ್ವಾರ್ಥದಿಂದ ತುಂಬಿದ್ದಾಗಿದೆ. ಕರ್ತನ ಪ್ರೀತಿಯಾದರೋ ಶಾಶ್ವತವಾದದ್ದು. ನಮ್ಮಲ್ಲಿ ಹಣ ಇರಲಿ ಇಲ್ಲದಿರಲಿ, ಆರೋಗ್ಯ ಇರಲಿ ಇಲ್ಲದಿರಲಿ, ಆಸ್ತಿಪಾಸ್ತಿ, ಅಂತಸ್ತು, ಪದವಿ ಇರಲಿ ಇಲ್ಲದಿರಲಿ ಕರ್ತನು ನಮ್ಮನ್ನು ಎಂದೆಂದಿಗೂ ಪ್ರೀತಿಸುವವನಾಗಿದ್ದಾನೆ. "ಕ್ಷಣ ಮಾತ್ರ ನಿನ್ನನ್ನು ಬಿಟ್ಟಿದ್ದೆನು, ಮಹಾಕೃಪೆಯಿಂದ ಸೇರಿಸಿಕೊಳ್ಳುವೆನು" (ಯೆಶಾ. 54:7) ಕೆಲವು ಸಮಯಗಳಲ್ಲಿ ನಮಗೆ ಕರ್ತನು ನಮ್ಮನ್ನು ಬಿಟ್ಟು ಬಿಟ್ಟಿದ್ದಾನೆ ಎಂಬುದಾಗಿ ಅನ್ನಿಸುತ್ತದೆ ವಾಸ್ತವದಲ್ಲಿ ಆ ರೀತಿ ಇಲ್ಲ. ಮತ್ತಾ. 28:20 ರಲ್ಲಿ ಹೇಳಿದ ಹಾಗೆ ಯುಗದ ಸಮಾಪ್ತಿಯವರೆಗೂ ಅಂದರೆ ಈ ಲೋಕದ ಜೀವಿತದಲ್ಲೂ, ನಂತರದಲ್ಲೂ ಕರ್ತನು ಎಂದೆಂದಿಗೂ ನಮ್ಮೊಂದಿಗೆ ಇದ್ದಾನೆ. ಕೀರ್ತ. 23:4 ರಲ್ಲಿ ದಾವೀದನು ಈ ರೀತಿ ಹೇಳುತ್ತಾನೆ, ಕಾರ್ಗತ್ತಲಿನ ಕಣಿವೆಯಲ್ಲಿ ನಾನು ಹಾದು ಹೋಗುವಾಗಲೂ ನೀನು ಹತ್ತಿರವಿರುವುದರಿಂದ ಕೇಡಿಗೆ ಹೆದರೆನು. ನಿಮ್ಮ ಕಷ್ಟದ ಸಮಯದಲ್ಲಿ ನಿಮ್ಮ ಬಂಧುಗಳು, ಕುಟುಂಬದವರು, ಸ್ನೇಹಿತರು ನಿಮ್ಮನ್ನು ಬಿಟ್ಟು ಹೋಗಬಹುದು ಕರ್ತನು ಎಂದಿಗೂ ನಿಮ್ಮನ್ನು ಬಿಟ್ಟು ಹೋಗುವುದಿಲ್ಲ. "ಬೆಟ್ಟಗಳು ಸ್ಥಳವನ್ನು ಬಿಟ್ಟು ಹೋದಾವು, ಗುಡ್ಡಗಳು ಕದಲಿಯಾವು; ಆದರೆ ನನ್ನ ಕೃಪೆಯು ನಿನ್ನನ್ನು ಬಿಟ್ಟು ಹೋಗದು, ಸಮಾಧಾನದ ನನ್ನ ಒಪ್ಪಂದವು ಕದಲದು ಎಂದು ನಿನ್ನನ್ನು ಕರುಣಿಸುವ ಯೆಹೋವನು ಅನ್ನುತ್ತಾನೆ" (ಯೆಶಾ. 54:10). ಪ್ರಿಯ ದೇವರ ಮಕ್ಕಳೇ, ಎಲ್ಲಾ ಪರಿಸ್ಥಿತಿಗಳಲ್ಲಿ ನಿನ್ನನ್ನು ಪ್ರೀತಿಸುವ, ಕರುಣಿಸುವ, ಆಶೀರ್ವದಿಸುವ ಕರ್ತನು ನಿಮ್ಮೊಂದಿಗಿದ್ದಾನೆ. ಯಾಬೇಚನ ಎಲ್ಲೆಗಳನ್ನು ವಿಸ್ತರಿಸಿದಂತೆ ಆತನು ನಿನ್ನ ಎಲ್ಲೆಗಳನ್ನು ವಿಸ್ತರಿಸುತ್ತಾನೆ.

(1 ಪೂರ್ವ. 4:9–10, ಯೆಶಾ. 54:2–4) ಎಲ್ಲಾ ಪರಿಸ್ಥಿತಿಗಳಲ್ಲಿ ನಿನ್ನನ್ನು ಪ್ರೀತಿಸುವ ಕರ್ತನ ಬಳಿಗೆ ಓಡಿ ಬಾ. ಆತನು ನಿನ್ನನ್ನು ಕರುಣಿಸಿ ನಿನ್ನ ಎಲ್ಲಾ ಇಕ್ಕಟ್ಟುಗಳಿಂದ ಬಿಡಿಸಲು ಶಕ್ತನಾಗಿದ್ದಾನೆ. "ಪಸ್ಕ ಹಬ್ಬದ ಮುಂದೆ ಯೇಸು ತಾನು ಈ ಲೋಕವನ್ನು ಬಿಟ್ಟು ತಂದೆಯ ಬಳಿಗೆ ಹೋಗಬೇಕಾದ ಕಾಲ ಬಂತೆಂದು ತಿಳುಕೊಂಡು ಲೋಕದಲ್ಲಿರುವ ತನ್ನವರನ್ನು ಪ್ರೀತಿಸಿ ಪರಿಪೂರ್ಣವಾಗಿ ಅವರನ್ನು ಪ್ರೀತಿಸುತ್ತಾ ಬಂದನು" (ಯೋಹಾ. 13:1).

**ಪಾಸ್ಟರ್ ಸುನಿಲ್ ಜಾನ್ ಡಿ'ಸೋಜಾ**
ಹಿರಿಯ ಸಂಪಾದಕರು

# ಪ್ರಕಟಣೆ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

ಕ್ರೈಸ್ತತ್ವವು ಏನಾಗಿದೆ?

1) **ಕ್ರೈಸ್ತತ್ವವು ಹೊಸ ಜನನವಾಗಿದೆ** : (ಯೋಹಾ.1:12–13) ಯಾರ‍್ಯಾರು ಆತನನ್ನು (ಕ್ರಿಸ್ತ ಯೇಸುವನ್ನು) ಅಂಗೀಕರಿಸಿದರೋ ಅಂದರೆ ಆತನ ಹೆಸರಿನಲ್ಲಿ ನಂಬಿಕೆಯಿಟ್ಟರೋ ಅವರಿಗೆ ದೇವರ ಮಕ್ಕಳಾಗುವ ಅಧಿಕಾರ ಕೊಟ್ಟನು. ಇವರು ರ‍್ತಕ ಸಂಬಂಧದಿಂದಾಗಲಿ ಕಾಮದಿಂದಾಗಲಿ ಪುರುಷ ಸಂಕಲ್ಪದಿಂದಾಗಲಿ ಹುಟ್ಟಿದವರಲ್ಲ, ದೇವರಿಂದಲೇ ಹುಟ್ಟಿದವರು. ಏದೆನಿನಲ್ಲಿ ಆದಾಮ ಹವ್ವರು ದೇವರಿಗೆ ವಿರುದ್ಧವಾಗಿ ಪಾಪ ಮಾಡಿದಾಗ ಆತ್ಮದಲ್ಲಿ ಸತ್ತು ಹೋದರು. ಇದರಿಂದಾಗಿ ದೇವರ ಅನ್ಯೋನ್ಯತೆ ಮತ್ತು ಸಂಬಂಧವನ್ನು ಕಳೆದುಕೊಂಡರು. ಮನುಷ್ಯನಿಗೆ ದೇವರು ಕರ್ತನಾದ ಯೇಸುಕ್ರಿಸ್ತನಲ್ಲಿ ದೇವರ ಮಕ್ಕಳಾಗುವ ಅವಕಾಶವನ್ನು ಪುನ: ಕಲ್ಪಿಸಿಕೊಟ್ಟಿದ್ದಾನೆ. ಯಾವುದೇ ಮನುಷ್ಯನು ದೇವರ ವಾಕ್ಯವನ್ನು (ಸುವಾರ್ತೆ)ಯನ್ನು ಕೇಳಿ ತಾನು ಪಾಪಿಯಾಗಿದ್ದೇನೆಂದು ತಿಳುಕೊಂಡು ಪಶ್ಚಾತ್ತಾಪಪಟ್ಟು ದೇವರಲ್ಲಿ ಕ್ಷಮೆ ಕೇಳಿ ಪಾಪಗಳನ್ನು ಅರಿಕೆ ಮಾಡಿ ಇನ್ನೇಂದಿಗೂ ಪಾಪದ ಜೀವನ ಜೀವಿಸುವುದಿಲ್ಲವೆಂಬ ತೀರ್ಮಾನ ಮಾಡಿ ಕರ್ತನಾದ ಯೇಸುಕ್ರಿಸ್ತನು ತನ್ನ ಪಾಪಕ್ಕಾಗಿ ಶಿಲುಬೆಯಲ್ಲಿ ಪ್ರಾಣ ಕೊಟ್ಟು ತನಗಾಗಿ ಹೂಣಲ್ಪಟ್ಟು, ತನಗಾಗಿ ಮೂರನೆಯ ದಿನದಲ್ಲಿ ಮರಣದಿಂದ ಎದ್ದು ಬಂದನೆಂದು ಹೃದಯದಲ್ಲಿ ನಂಬಿ ತನ್ನ ಬಾಯಲ್ಲಿ ಅರಿಕೆ ಮಾಡಿ ಯೇಸುಕ್ರಿಸ್ತನನ್ನು ತನ್ನ ಜೀವಿತದ ರಕ್ಷಕನೂ ಒಡೆಯನೂ ಆಗಿ ಅಂಗೀಕರಿಸುವುದಾದರೆ ಆತನ ತಂದೆಯಾದ ದೇವರಿಗೆ ಕರ್ತನಾದ ಯೇಸು ಕ್ರಿಸ್ತನಲ್ಲಿ ಪುನ: ಆತ್ಮದಲ್ಲಿ ಹುಟ್ಟುತ್ತಾನೆ. (ಆದಾಮ ಹವ್ವರ ಆತ್ಮ ಪಾಪ ಮಾಡಿದಾಗ ಸತ್ತಂತೆ ಅವರಿಗೆ ಹುಟ್ಟಿದ ಎಲ್ಲರೂ ಆತ್ಮದಲ್ಲಿ ಸತ್ತಿದ್ದಾರೆ, ಆತ್ಮದಲ್ಲಿ ಜೀವ ಕಳೆದುಕೊಂಡಿದ್ದಾರೆ) ಅವನ ಆತ್ಮ ಪುನ: ಜೀವ ಹೊಂದಿ ದೇವರೊಂದಿಗೆ ಅನ್ಯೋನ್ಯತೆ ಮತ್ತು ಸಂಬಂಧ ಬೆಳೆಸುತ್ತದೆ. ಇದು ಕ್ರೈಸ್ತತ್ವದ ಪ್ರಥಮ ಹೆಜ್ಜೆಯಾಗಿದೆ. ನಿಕೋದೋಮನಿಗೆ ಯೇಸು ಈ ರೀತಿ ಹೇಳಿದನು, ನಾನು ನಿನಗೆ ನಿಜನಿಜವಾಗಿ ಹೇಳುತ್ತೇನೆ, ಒಬ್ಬನು ಹೊಸದಾಗಿ ಹುಟ್ಟದಿದ್ದರೆ ಅವನು ದೇವರ ರಾಜ್ಯವನ್ನು ಕಾಣಲಾರನು. (ಯೋಹಾ. 3:3).

ಯೋಹಾ. 3:5 ನಾನು ನಿನಗೆ ನಿಜನಿಜವಾಗಿ ಹೇಳುತ್ತೇನೆ, ಒಬ್ಬನು ನೀರಿನಿಂದಲೂ ಆತ್ಮನಿಂದಲೂ ಹುಟ್ಟದಿದ್ದರೆ ದೇವರ ರಾಜ್ಯಕ್ಕೆ ಸೇರಲಾರನು. ನಿಕೋದೋಮನಿಗೆ ಇದು ಅರ್ಥವಾಗದೆ ಇದ್ದದರಿಂದ ಅವನು ಯೇಸುವಿಗೆ ಪ್ರಶ್ನೆ ಕೇಳುತ್ತಾನೆ, ಯೋಹಾ. 3:4 ಮನುಷ್ಯನು ಮುದುಕನಾದ ಮೇಲೆ ಹುಟ್ಟುವುದು ಹೇಗೆ? ಅವನು ತನ್ನ ತಾಯಿಯ ಗರ್ಭದಲ್ಲಿ ತಿರುಗಿ ಸೇರಿ ಹುಟ್ಟುವುದಾದಿತೆ? ಎಂದು ಕೇಳಿದನು. ಅದಕ್ಕೆ ಯೇಸು ಉತ್ತರವಾಗಿ ಯೋಹಾ. 3:6 ದೇಹದಿಂದ ಹುಟ್ಟಿದ್ದು ದೇಹವೇ ಆತ್ಮದಿಂದ ಹುಟ್ಟಿದ್ದು ಆತ್ಮವೇ. ದೇಹದ ಜನನ ಬೇರೆ ಆತ್ಮದ ಜನನ ಬೇರೆ ದೇಹದಿಂದ ಹುಟ್ಟಲು ಹೇಗೆ ಪುರುಷ ದೇಹ ಬೇಕು, ಸ್ತ್ರೀ ದೇಹ ಬೇಕು, ರಕ್ತದ ಸಂಬಂಧ ಬೇಕು, ಕಾಮ ಬೇಕು (ಯೋಹಾ. 1:13). ಬೀಜಬೇಕು ಅದೇ ರೀತಿ ಆತ್ಮದ ಜನನಕ್ಕೆ ಕ್ರಿಸ್ತನೆಂಬ ಬೀಜಬೇಕು. 1 ಯೋಹಾ. 3:9 ರಲ್ಲಿ ದೇವರಿಂದ ಹುಟ್ಟಿದವನು ಪಾಪ ಮಾಡನು, ದೇವರ ಜೀವವು ಆತನಲ್ಲಿ ನೆಲೆಗೊಂಡಿದೆ. ಅವನು ದೇವರಿಂದ ಹುಟ್ಟಿದ ಕಾರಣ ಪಾಪ ಮಾಡುವವನಾಗಿರಲಾರನು.

2) **ಕ್ರೈಸ್ತತ್ವ ಪುತ್ರತ್ವವಾಗಿದೆ** (1 ಯೋಹಾ. 3:1–2) ದೇವರ ಮಕ್ಕಳೆಂಬ ಹೆಸರನ್ನು ನಮಗೆ ಕೊಡುವುದರಲ್ಲಿ ತಂದೆಯು ಎಂಥಾ ಪ್ರೀತಿಯನ್ನು ನಮ್ಮ ಮೇಲೆ ಇಟ್ಟಿದ್ದಾನೆ ನೋಡಿರಿ ನಾವು ಆತನ ಮಕ್ಕಳಾಗಿದ್ದೇವೆ. ಈ ಕಾರಣದಿಂದ ಲೋಕವು ನಮ್ಮನ್ನು ತಿಳುಕೊಳ್ಳುವುದಿಲ್ಲ. ಅದು ಆತನನ್ನು ತಿಳುಕೊಳ್ಳಲಿಲ್ಲವಲ್ಲ. ಪ್ರಿಯರೇ, ಈಗ ದೇವರ ಮಕ್ಕಳಾಗಿದ್ದೇವೆ ಮುಂದೆ ನಾವು ಏನಾಗುವೆವೋ ಅದು ಇನ್ನು ಪ್ರತ್ಯಕ್ಷವಾಗಲಿಲ್ಲ ಕ್ರಿಸ್ತನು ಪ್ರತ್ಯಕ್ಷನಾದರೆ ನಾವು ಆತನ ಹಾಗಿರುವೆವೆಂದು ಬಲ್ಲೆವು. ಯಾಕಂದರೆ ಆತನಿರುವ ಪ್ರಕಾರವೇ ಆತನನ್ನು ನೋಡುವೆವು. ನಾವು ಕ್ರಿಸ್ತನಿಗೆ ಹುಟ್ಟಿದ್ದರಿಂದಾಗಿ ದೇವರಿಗೆ ಮಕ್ಕಳಾಗಿದ್ದೇವೆ. ಕ್ರೈಸ್ತತ್ವ ಅಂದರೆ ಅದು ಪುತ್ರತ್ವವಾಗಿದೆ. ಯಾವಾಗ ಕರ್ತನಾದ ಯೇಸುಕ್ರಿಸ್ತನನ್ನು ನಮ್ಮ ಜೀವಿತದ ಸ್ವಂತ ರಕ್ಷಕನೂ ಒಡೆಯನಾಗಿ ಅಂಗೀಕರಿಸುತ್ತೇವೆ ಅವಾಗ ದೇವರ ಮಕ್ಕಳು ನಾವು ಆಗುತ್ತೇವೆ. ಈ ಲೋಕದಲ್ಲಿ ಒಂದು ಕುಟುಂಬದಲ್ಲಿ

ಇಗೋ, ಬೇಗನೆ ಬರುತ್ತೇನೆ. ಈ ಪುಸ್ತಕದಲ್ಲಿ ಬರೆದಿರುವ ಪ್ರವಾದನೆಯ ಮಾತುಗಳನ್ನು ಕೈಕೊಂಡು ನಡೆಯುವವನು ಧನ್ಯನು (ಪ್ರಕ. 22:7).

ತಂದೆ ತಾಯಿಗೆ ಹುಟ್ಟಿದ ಮಕ್ಕಳಿಗೆ ತಂದೆ ತಾಯಿಯ ಆಸ್ತಿಯಲ್ಲಿ ಹೇಗೆ ಪಾಲು ದೊರಕುತ್ತದೋ ಅದೇ ರೀತಿ ತಂದೆಯಾದ ಯೇಸುಕ್ರಿಸ್ತನಲ್ಲಿ ಎಲ್ಲಾ ಒಳ್ಳೆಯ ಆಶೀರ್ವಾದಗಳಲ್ಲಿ ನಮಗೆ ಪಾಲು ಸಿಗುತ್ತದೆ. ಕ್ರಿಸ್ತನೊಂದಿಗೆ ಪರಲೋಕದ ಆಸ್ತಿಗೆ ನಾವು ಬಾಧ್ಯರಾಗುತ್ತೇವೆ. 'ನೀವು ಕ್ರಿಸ್ತನವರಾಗಿದ್ದರೆ ಅಬ್ರಹಾಮನ ಸಂತತಿಯವರು ವಾಗ್ದಾನಕ್ಕನುಸಾರವಾಗಿ ಬಾಧ್ಯರೂ ಆಗಿದ್ದೀರಿ' (ಗಲಾ. 3:29). ಕರ್ತನಾದ ಯೇಸುಕ್ರಿಸ್ತನು ನಮ್ಮ ಹಿರಿಯ ಅಣ್ಣನೂ ಆಗಿದ್ದಾನೆ. ಯಾಕಂದರೆ ದೇವರು ತನ್ನ ಮಗನಿಗೆ ಅನೇಕ ಮಂದಿ ಸಹೋದರರಿದ್ದು ಅವರಲ್ಲಿ ಆತನೇ ಹಿರಿಯವನಾಗಿರಬೇಕೆಂದು ಉದ್ದೇಶಿಸಿ ತಾನು ಯಾರನ್ನು ತನ್ನವರೆಂದು ಮೊದಲು ತಿಳುಕೊಂಡನೋ ಅವರನ್ನು ತನ್ನ ಮಗನ ಸಾರೂಪ್ಯವುಳವರಾಗುವುದಕ್ಕೆ ಮೊದಲೇ ನೇಮಿಸಿದನು (ರೋಮ. 8:29).

ತಂದೆಯಾದ ದೇವರಿಗೆ ಕರ್ತನಾದ ಕ್ರಿಸ್ತನಲ್ಲಿ ನಾವು ಮಕ್ಕಳಾಗಿರುವುದರಿಂದ ನಮಗೆ ಸಿಗಬೇಕಾದ ಬಾಧ್ಯತೆಗಳು:

1) ಪವಿತ್ರರಾದವರಲ್ಲಿ ಹಕ್ಕು (ಅ.ಕೃ. 20:32, 26:18).

2) ಲೋಕದ ಬಾಧ್ಯತೆ (ರೋಮ. 4:13).

3) ಮಕ್ಕಳೆಂಬ ಬಾಧ್ಯತೆ (ರೋಮ. 8:13, ಗಲಾ. 4:7).

4) ವಿಮೋಚನೆಯ ಬಾಧ್ಯತೆ (ಎಫೆ. 1:14).

5) ಕ್ರಿಸ್ತನ ರಾಜ್ಯದ ಬಾಧ್ಯತೆ (ಎಫೆ. 5:5).

6) ದೇವರ ರಾಜ್ಯದ ಬಾಧ್ಯತೆ (ಎಫೆ. 5:5).

7) ಬೆಳಕಿನ ರಾಜ್ಯದ ಬಾಧ್ಯತೆ (ಕೊಲೊ. 1:12).

8) ಪರಲೋಕದ ಬಾಧ್ಯತೆ (ಕೊಲೊ. 3:24).

9) ನಿತ್ಯ ಬಾಧ್ಯತೆ (ಇಬ್ರಿ. 9:15)

10)ಲಯಿ ಕ್ಷಯ ಕಳಂಕವಿಲ್ಲದ ಬಾಧ್ಯತೆ (1ಪೇತ್ರ. 1:3–4).

**3) ಕ್ರೈಸ್ತತ್ವ ಅಂದರೆ ಹೊಸ ವಸ್ತ್ರ ಧರಿಸುವದು :–** "ನಾನು ಯೆಹೋವನಲ್ಲಿ ಪರಮಾನಂದ ಪಡುವೆನು, ನನ್ನ ಆತ್ಮವು ನನ್ನ ದೇವರಲ್ಲಿ ಹಿಗ್ಗುವುದು; ವರನು ಬಾಸಿಂಗವನ್ನು ಧರಿಸಿಕೊಳ್ಳುವಂತೆಯೂ ವಧುವು ತನ್ನನ್ನು ಆಭರಣಗಳಿಂದ ಅಲಂಕರಿಸಿಕೊಳ್ಳುವ ಹಾಗೂ ಆತನು ನನಗೆ ರಕ್ಷಣೆಯೆಂಬ ವಸ್ತ್ರವನ್ನು ಹೊದಿಸಿ ಧರ್ಮವೆಂಬ ನಿಲುವಂಗಿಯನ್ನು ತೊಡಿಸಿದ್ದನಲ್ಲಾ" (ಯೆಶಾ. 61 :10). ಮಗುವಿಗೆ ಹೇಗೆ ಹೊಸ ವಸ್ತ್ರವನ್ನು ತೊಡಿಸುತ್ತಾರೆ ಅದೇ ರೀತಿ ಕರ್ತನು ನಮಗೆ ಆದಾಮನು ಪಾಪದ ನಿಮಿತ್ತವಾಗಿ ಕಳಕೊಂಡಂತಹ ರಕ್ಷಣೆ ಎಂಬ ವಸ್ತ್ರವನ್ನು ತೊಡಿಸುತ್ತಾನೆ. ಕರ್ತನು ಯಾವುದರಿಂದ ರಕ್ಷಿಸುತ್ತಾನೆ? ಪಾಪದ ಶಿಕ್ಷೆಯಾದ ನಿತ್ಯ ನರಕದಿಂದ ರಕ್ಷಿಸುತ್ತಾನೆ, ಪಾಪದ ಜೀವಿತದಿಂದ ರಕ್ಷಿಸುತ್ತಾನೆ, ಕೆಟ್ಟ ಚಟಗಳಿಂದ ಬಿಡಿಸಿ ರಕ್ಷಿಸುತ್ತಾನೆ, ನ್ಯಾಯತೀರ್ಪಿನಿಂದ ರಕ್ಷಿಸುತ್ತಾನೆ. ಕರ್ತನಾದ ಯೇಸುಕ್ರಿಸ್ತನು ಈ ಭೂಮಿಗೆ ಮನುಷ್ಯನಾಗಿ ಬಂದಂತಹ ಮುಖ್ಯ ಉದ್ದೇಶ ದುಷ್ಟರನ್ನು ನಾಶಮಾಡಲು ಅಲ್ಲ, ದುಷ್ಟರಲ್ಲಿರುವ ದುಷ್ಟತನವನ್ನು ನಾಶಮಾಡಿ ದುಷ್ಟರನ್ನು ನಿತ್ಯ ನರಕದ ಬೆಂಕಿಯಿಂದ ರಕ್ಷಿಸುವುದಕ್ಕಾಗಿ ಬಂದನು.

**ಕ್ರಿಸ್ತನಲ್ಲಿ ನಾವು ಧರಿಸಬೇಕಾದ ಸಂಗತಿಗಳು :–**

1) ಪ್ರತಾಪವನ್ನು ಧರಿಸಬೇಕು (ಯೆಶಾ. 52:1)

2) ಬೆಳಕಿನ ಆಯುಧಗಳನ್ನು ಧರಿಸಬೇಕು (ರೋಮ. 13:13).

3) ಕ್ರಿಸ್ತನನ್ನು ಧರಿಸಬೇಕು (ಗಲಾ. 3:27).

4) ಒಳ್ಳೆ ಗುಣಗಳನ್ನು ಧರಿಸಬೇಕು(ಕೊಲೊ.3:12–14).

5) ನೂತನ ಸ್ವಭಾವವನ್ನು ಧರಿಸಬೇಕು (ಎಫೆ. 4:23)

6) ಸರ್ವಾಯುಧಗಳನ್ನು ಧರಿಸಬೇಕು (ಎಫೆ.6:10–12) (ಕ್ರಿಸ್ತನು ಅನುಗ್ರಹಿಸುವ ಆತ್ಮೀಕವಾದ ಆಯುಧಗಳು).

7) ನಯವಾದ ನಾರುಮಡಿ ಎಂಬ ಒಳ್ಳೇಯ ಸತ್ಕ್ರಿಯೆಗಳನ್ನು ಧರಿಸಬೇಕು (ಪ್ರಕ. 19:8).

**4) ಕ್ರೈಸ್ತತ್ವ ಅಂದರೆ ಬೆಳವಣಿಗೆ** (2 ಪೇತ್ರ. 3:18): – ನೀವು ಕೃಪೆಯಲ್ಲಿಯೂ ನಮ್ಮ ಕರ್ತನೂ ರಕ್ಷಕನೂ ಆಗಿರುವ ಯೇಸುಕ್ರಿಸ್ತನ ವಿಷಯವಾದ ಜ್ಞಾನದಲ್ಲಿಯೂ ಅಭಿವೃದ್ಧಿಯನ್ನು ಹೊಂದುತ್ತಾ ಇರ್ರಿ ಆತನಿಗೆ ಈಗಲೂ ಸದಾಕಾಲವೂ ಸ್ತೋತ್ರ ಆಮೆನ್. ಹುಟ್ಟಿದ ಮಗುವಿಗೆ ಬೆಳವಣಿಗೆ ಇದೆ. ಒಂದು ವೇಳೆ ಅದು ಬೆಳೆಯದೆ ಹೋದರೆ ಮಗುವಿನಲ್ಲಿ ಏನೋ ಒಂದು ರೋಗದ ಸಮಸ್ಯೆ ಇದೆ ಎಂದು ತಿಳುಕೊಳ್ಳಬಹುದು. ಅದೇ ರೀತಿ ಕ್ರಿಸ್ತನಲ್ಲಿ ಹೊಸದಾಗಿ ಹುಟ್ಟಿದ ದೇವರ ಮಕ್ಕಳಿಗೆ ಆತ್ಮೀಕವಾದ ಒಂದು ಬೆಳವಣಿಗೆ ಇದೆ. ಒಂದು ಎಲ್‌ಕೆಜಿಗೆ (LKG) ಹಾಕಿದ ಮಗು ವರ್ಷ ವರ್ಷವೂ ಇನ್ನೊಂದು ಕ್ಲಾಸಿಗೆ ದಾಟಿ ಹೋಗುತ್ತದೆ. ಅದೇ ರೀತಿ ದೇವರ ಮಕ್ಕಳಾದ ನಾವು ಕೂಡ ದೇವರ ವಾಕ್ಯದ ಜ್ಞಾನದಲ್ಲಿ ಬೆಳೆಯುತ್ತಲೇ

ದೇವರ ಮೇಲಣ ಪ್ರೀತಿ ಏನೆಂದರೆ ಆತನ ಆಜ್ಞೆಗಳನ್ನು ಕೈಕೊಂಡು ನಡೆಯುವದೇ ಆತನ ಆಜ್ಞೆಗಳು ಭಾರವಾದವುಗಳಲ್ಲ (1 ಯೋಹಾ. 5:3).

ಇರಬೇಕು. ದೇವರ ವಾಕ್ಯ ನಮಗೆ ಈ ರೀತಿ ಎಚ್ಚರಿಸುತ್ತದೆ, "ನಾವು ಇನ್ನು ಮೇಲೆ ಕೂಸುಗಳಾಗಿರಬಾರದು; ದುರ್ಜನರ ವಂಚನೆಗೂ ದುರ್ಬೋಧಕರ ಕುಯುಕ್ತಿಗೂ ಒಳಬಿದ್ದು ನಾನಾ ಉಪದೇಶಗಳಿಂದ ಕಂಗೆಟ್ಟು ಗಾಳಿಯಿಂದ ಅತ್ತಿತ್ತ ನೂಕಿಸಿಕೊಂಡು ಹೋಗುವವರ ಹಾಗಿರಬಾರದು. ಪ್ರೀತಿಯಿಂದ ಸತ್ಯವನ್ನನುಸರಿಸುತ್ತಾ ಬೆಳೆದು ಎಲ್ಲಾ ವಿಷಯಗಳಲ್ಲಿಯೂ ಕ್ರಿಸ್ತನ ಐಕ್ಯವನ್ನು ಹೊಂದುತ್ತಾ ಬರಬೇಕು. ಆತನೇ ಶಿರಸ್ಸು; ದೇಹವೆಲ್ಲಾ ಆತನ ಧೊರೆತನದಲ್ಲಿದ್ದು ತನ್ನಲ್ಲಿರುವ ಎಲ್ಲಾ ನರಗಳಿಂದ ಬಿಗಿಯಾಗಿ ಜೋಡಿಸಲ್ಪಟ್ಟು ಪ್ರತಿ ಅಂಗದಿಂದ ಅದರದರ ಶಕ್ತಿಯ ಪ್ರಕಾರ ಸಹಾಯಹೊಂದಿ ಪ್ರೀತಿಯಿಂದ ಐಕ್ಯವಾಗಿದ್ದು ಕ್ಷೇಮಾಭಿವೃದ್ಧಿಯನ್ನು ಹೊಂದುತ್ತದೆ" (ಎಫೆ. 4:14–16). "ಈ ವಿಷಯದಲ್ಲಿ ನಾವು ಹೇಳಬೇಕಾದ ಮಾತು ಬಹಳ ಉಂಟು, ಆದರೆ ನಿಮ್ಮ ಕಿವಿಗಳು ಮಂದವಾದದರಿಂದ ಅದನ್ನು ವಿವರಿಸುವದು ಕಷ್ಟವಾಗಿದೆ. ಕಾಲವನ್ನು ನೋಡಿದರೆ ನೀವು ಇಷ್ಟರೊಳಗೆ ಬೋಧಕರಾಗಿರಬೇಕಾಗಿದ್ದರೂ ಒಬ್ಬನು ನಿಮಗೆ ದೈವೋಕ್ತಿಗಳ ಮೂಲಪಾಠಗಳನ್ನು ತಿರಿಗಿ ಕಲಿಸಿಕೊಡಬೇಕಾಗಿದೆ; ನೀವು ಹಾಲು ಕುಡಿಯತಕ್ಕವರೇ ಹೊರತು ಗಟ್ಟಿಯಾದ ಆಹಾರವನ್ನು ತಿನ್ನತಕ್ಕವರಲ್ಲ. ಹಾಲು ಬೇಕಾದವನು ಕೂಸಿನಂತಿದ್ದು ನೀತಿವಾಕ್ಯದಲ್ಲಿ ಅನುಭವವಿಲ್ಲದವನಾಗಿದ್ದಾನೆ. ಗಟ್ಟಿಯಾದ ಆಹಾರವು ಪ್ರಾಯಸ್ಥರಿಗೋಸ್ಕರ ಅಂದರೆ ಜ್ಞಾನೇಂದ್ರಿಯಗಳನ್ನು ಸಾಧನೆಯಿಂದ ಶಿಕ್ಷಿಸಿಕೊಂಡು ಇದು ಒಳ್ಳೇದು ಅದು ಕೆಟ್ಟದ್ದು ಎಂಬ ಭೇದವನ್ನು ತಿಳಿದವರಿಗೋಸ್ಕರವಾಗಿದೆ" (ಇಬ್ರಿ. 5:11–14). "ಆದಕಾರಣ ಎಲ್ಲಾ ಕೆಟ್ಟತನವನ್ನೂ ಎಲ್ಲಾ ವಂಚನೆಯನ್ನೂ ಕಪಟವನ್ನೂ ಹೊಟ್ಟೆಕಿಚ್ಚನ್ನೂ ಎಲ್ಲಾ ತರದ ನಿಂದೆಯನ್ನೂ ವಿಸರ್ಜಿಸಿ ಹಸುಮಕ್ಕಳಂತೆ ಪಾರಮಾರ್ಥಿಕವಾದ ಶುದ್ಧ ಹಾಲನ್ನು ಬಯಸಿರಿ; ಅದರಿಂದ ಬೆಳೆಯುತ್ತಾ ರಕ್ಷಣೆಯನ್ನು ಹೊಂದುವಿರಿ; ಕರ್ತನು ದಯಾಳುವೆಂದು ನೀವು ಅನುಭವದಿಂದ ತಿಳಿದುಕೊಂಡಿದ್ದೀರಲ್ಲವೋ?" (1 ಪೇತ್ರ. 2:1–2). "ನೀತಿವಂತರು ಖರ್ಜೂರದ ಮರದಂತೆ ಬೆಳೆಯುವರು; ಲೆಬನೋನಿನ ದೇವದಾರುವೃಕ್ಷದ ಹಾಗೆ ವೃದ್ಧಿಯಾಗುವರು. ಯೆಹೋವನ ಆಲಯದಲ್ಲಿ [ಸಸಿಗಳಂತೆ] ನೆಡಲ್ಪಟ್ಟವರು ನಮ್ಮ ದೇವರ ಅಂಗಳದಲ್ಲಿ ಚೆನ್ನಾಗಿ ಬೆಳೆಯುವರು. ಮುಪ್ಪಿನಲ್ಲಿಯೂ ಫಲಿಸುವರು; ಪುಷ್ಟಿಯಾಗಿದ್ದು ಶೋಭಿಸುವರು. ಹೀಗೆ ಅವರು ಯೆಹೋವನ ಸತ್ಯಸಂಧತೆಗೆ ದೃಷ್ಟಾಂತರಾಗಿರುವರು. ಆತನೇ ನನ್ನ ಬಂಡೆಯು; ಆತನು ನಿರ್ವಂಚಕನು" (ಕೀರ್ತ. 92:12–15).

ಮುಂದುವರಿಯುವದು.......

**ಪಾಸ್ಟರ್ ಸುನಿಲ್ ಜಾನ್ ಡಿ'ಸೋಜಾ**
ಹಿರಿಯ ಸಭಾಪಾಲಕರು, ಬೇತೇಲ್ ಚರ್ಚ್.

## ಪ್ರಾರ್ಥನಾ ಮನವಿಗಳು

- ದೇಶದ ಉಜ್ಜೀವನಕ್ಕಾಗಿ ಪ್ರಾರ್ಥಿಸುವ ಭಾರವನ್ನು ಹೊಂದಿಕೊಂಡು ಎಲ್ಲೆಡೆ ಪ್ರಾರ್ಥನಾ ಗುಂಪುಗಳು ಎದ್ದೇಳುವಂತೆ ಪ್ರಾರ್ಥಿಸಿರಿ.
- ಪಿಯುಸಿ ಮತ್ತು ಎಸ್.ಎಸ್.ಎಲ್.ಸಿ ಪರೀಕ್ಷೆಯನ್ನು ಬರೆದಿರುವ ಪ್ರತಿಯೊಂದು ವಿದ್ಯಾರ್ಥಿಗಳು ಉತೀರ್ಣರಾಗುವುದಕ್ಕಾಗಿ ಯಾವುದೇ ಆತ್ಮಹತ್ಯೆಗಳು ನಡೆಯದಂತೆ ಪ್ರಾರ್ಥಿಸಿರಿ.
- ನೂತನ ವರ್ಷದ ದಾಖಲಾತಿ ಹಾಗೂ ಮಕ್ಕಳ ಉತ್ತಮ ಭವಿಷ್ಯಕ್ಕಾಗಿ ಪ್ರಾರ್ಥಿಸಿರಿ.
- ಭಾರತ ದೇಶದ ಎಲ್ಲಾ ಜನರಿಗಾಗಿ, ರಾಷ್ಟ್ರಪತಿಗಾಗಿ, ಪ್ರಧಾನಮಂತ್ರಿಗಾಗಿ, ಮುಖ್ಯಮಂತ್ರಿಗಳಿಗಾಗಿ, ಸಚಿವರುಗಳಿಗಾಗಿ, ಅಧಿಕಾರಿಗಳಿಗಾಗಿ, ನ್ಯಾಯಾಧಿಪತಿಗಳಿಗಾಗಿ ಕರ್ತನ ಬಳಿ ಬಿನ್ನಹಗಳನ್ನು ಮಾಡಿರಿ.
- ಪ್ರತಿಯೊಂದು ವಿಶ್ವಾಸಿಗಳು ಮತ್ತು ದೇವ ಸೇವಕರುಗಳು ಪರಿಶುದ್ಧರಾಗಿ ಜೀವಿಸಲು ಪ್ರಾರ್ಥಿಸಿರಿ.
- ದೇವರ ಸ್ವರ ಮಾಸ ಪತ್ರಿಕೆಯು ಇನ್ನು ಉತ್ತಮವಾಗಿ ಮುದ್ರಿಸಲು ಕರ್ತನು ಪ್ರತಿಯೊಬ್ಬರಿಗೂ ವಿಶೇಷವಾದ ಜ್ಞಾನದಿಂದ ತುಂಬಿಸುವಂತೆ ಪ್ರಾರ್ಥಿಸಿರಿ.
- ಕರ್ತನ ಸೇವೆಯಲ್ಲಿ ಬಿತ್ತುವ ಕೈಗಳಿಗಾಗಿ, ಮಿಶನರಿಗಳ ಅಗತ್ಯತೆಗಳು ಸಂಧಿಸಲ್ಪಡುವದಕ್ಕಾಗಿ ಪ್ರಾರ್ಥಿಸಿರಿ.

ನನ್ನ ವಾಕ್ಯಗಳನ್ನು ಕೇಳಿ ನನ್ನನ್ನು ಕಳುಹಿಸಿದಾತನನ್ನು ನಂಬುವವನು
ನಿತ್ಯಜೀವವನ್ನು ಹೊಂದಿದ್ದಾನೆ (ಯೋಹಾ. 5:24).

# ಶಿರಸ್ಸಿನ ಮೇಲೆ ಬರುವ 5 ಆಶೀರ್ವಾದಗಳು !

ನಿನ್ನ ತಂದೆಯು ಆಶೀರ್ವಾದಗಳು ಆದಿಯಿಂದಿದ್ದ ಪರ್ವತಗಳಿಂದುಂಟಾಗುವ ಮೇಲುಗಳಿಗಿಂತಲೂ ಸದಾಕಾಲವಾಗಿರುವ ಬೆಟ್ಟಗಳಿಂದುಂಟಾಗುವ ಉತ್ತಮ ವಸ್ತುಗಳಿಗಿಂತಲೂ ವಿಶೇಷವಾಗಿವೆ. ಇವೆಲ್ಲಾ ಯೋಸೇಫನ ಪಾಲಿಗೆ ಬರಲಿ. ಅಣ್ಣ ತಮ್ಮಂದಿರಲ್ಲಿ ಪ್ರಭುವಾಗಿರುವವನ ಶಿರಸ್ಸಿನ ಮೇಲುಂಟಾಗಲಿ" (ಆದಿ. 49:26).

ಪರಿಶುದ್ಧ ಜನರು ಸಾಯುವಾಗ ತಮ್ಮ ಮಕ್ಕಳನ್ನು, ಸಂತತಿಯನ್ನು ಆಶೀರ್ವದಿಸುವುದು ಅಭ್ಯಾಸ. ಯಾಕೋಬನ ಅಂತ್ಯ ಗಳಿಗೆಯು ಬಂದಾಗ ತನ್ನ 12 ಮಂದಿ ಮಕ್ಕಳನ್ನು ಆಶೀರ್ವದಿಸಿದರೂ ಸಹ ಯೋಸೇಫನ ಶಿರಸ್ಸಿನ ಮೇಲೆ ಬಂದ ಆಶೀರ್ವಾದಗಳು ಅಪಾರ. ಬಹಳ ಉನ್ನತವಾದುದು, ಶ್ರೇಷ್ಠವಾದುದು. ಶಿರಸ್ಸು ಎಂದೂ ಪ್ರಭುವಾಗಿರುವವನ ಮೇಲೆ ಎಂದೂ ಅಣ್ಣತಮ್ಮಂದಿರಿಗೆ ಪ್ರಭುವಾಗಿರುವವನ ಮೇಲೆ ಎಂದೂ ಉಚ್ಚರಿಸುತ್ತಾನೆ (ಆದಿ. 49:26).

ಯೋಸೇಫನ ಮೇಲೆ ಯಾಕೋಬನು ತನ್ನ ಕೈಗಳನ್ನಿಟ್ಟಾಗ ಪ್ರೀತಿ ಕರುಣೆ ಪ್ರವಾದನೆಯ ಮಾತುಗಳು ಇಳಿದು ಬಂದವು. ಸ್ವಂತ ಸಹೋದರರಿಂದ ದ್ವೇಷಿಸಲ್ಪಟ್ಟನು. ಐಗುಪ್ತ್ಯದಲ್ಲಿ ಅನ್ಯಾಯವಾದ ದೋಷಾರೋಪಣೆಯಿಂದ 13 ವರ್ಷಗಳು ಸೆರೆಮನೆಯಲ್ಲಿ ದಂಡನೆಯನ್ನು ಅನುಭವಿಸಿದನು. ಆದರೂ ಐಗುಪ್ತದಲ್ಲಿ ಸರ್ವಾಧಿಕಾರಿಯಾದಾಗ ಅವನ ಅಣ್ಣ ತಮ್ಮಂದಿರನ್ನು ಮರೆತುಬಿಡಲಿಲ್ಲ. ಪ್ರೀತಿಯಿಂದ ಅವರೆಲ್ಲರನ್ನೂ ಬರಮಾಡಿಕೊಂಡು ಅವರೆಲ್ಲರಿಗೂ ಔತಣವನ್ನು ಮಾಡಿಸಿದನಲ್ಲ. ಆದುದರಿಂದಲೇ ತಂದೆಯಾದ ಯಾಕೋಬನು ಅವನನ್ನು ಮನಸ್ಸಾರೆ ಆಶೀರ್ವದಿಸಿದನು.

ಯಾಕೋಬನು ಆಶೀರ್ವದಿಸಿದ ಹಾಗೆ ಸುಮಾರು 500 ವರ್ಷಗಳ ನಂತರ ಮೋಶೆ ತನಗೆ ವಯಸ್ಸಾದ ಕಾಲದಲ್ಲಿ ಸಾಯುವ ಮೊದಲು ಯೋಸೇಫನ ಗೋತ್ರದವರನ್ನು ಆಶೀರ್ವದಿಸಿದನು. ಭೂಮಿಯಲ್ಲಿ ಸಮೃದ್ಧಿಯಾಗಿ ಬೆಳೆಯುವ ಫಲ. ಇವೆಲ್ಲವುಗಳಲ್ಲಿ ಶ್ರೇಷ್ಠವಾದದ್ದೂ ಹೋರೇಬ್ ಬೆಟ್ಟದಲ್ಲಿನ ಮುಳ್ಳು ಗಿಡದಲ್ಲಿ ವಾಸಿಸಿದಾತನ ದಯೆಯೂ ಯೋಸೇಫ್ ವಂಶದವರ ಪಾಲಿಗೆ ಬರಲಿ" (ಧರ್ಮೋ. 33:16). ಗಮನಿಸಿರಿ. ಅಲ್ಲಿಯೂ "ಶಿರಸ್ಸು" ಎಂದೂ ಅತಿ ಶ್ರೇಷ್ಠವಾದದ್ದೂ ಎಂದು ಬರುತ್ತದೆ. ನಿಮ್ಮ ಶಿರಸ್ಸು ದೇವರ ಆಶೀರ್ವಾದವನ್ನು ಹೊಂದುವ ಸ್ಥಳವಾಗಿದೆ. ನಿಮ್ಮ ನಡುನೆತ್ತಿಯು, ಕರ್ತನ ಅಭಿಷೇಕವು ಇಳಿದು ಬರುವ ಸ್ಥಳವಾಗಿದೆ.

ಇಡೀ ಶರೀರಕ್ಕೆ ಶಿರಸ್ಸೇ ಪ್ರಧಾನವಾದುದು. ತಲೆಯಲ್ಲಿ ಸಾವಿರಾರು ಕಂಪ್ಯೂಟರ್‌ಗಳಿಗಿಂತಲೂ ಹೆಚ್ಚಾದ ಮೂಳೆಗಳಿವೆ, ಚಿಂತಿಸುವ ನರ ಮಂಡಲಗಳಿವೆ, ಜ್ಞಾಪಕಶಕ್ತಿಯಿದೆ, ತಲೆಯಲ್ಲಿಯೇ ಕಣ್ಣು, ಮೂಗು, ಬಾಯಿ, ಕಿವಿ ಎಲ್ಲವೂ ಇದೆ. ಈ ತಲೆಯಲ್ಲಿಯೇ ಮುಖದ ಸೌಂದರ್ಯವೂ ಇದೆ. ಯೇಸು ಸಭೆಯ ಶಿರಸ್ಸಾಗಿದ್ದಾನೆ. ನಾವು ಆತನ ಶರೀರವಾಗಿಯೂ ಅಂಗಗಳಾಗಿಯೂ ಇದ್ದೇವೆ. ಆರೋನನ ಶಿರಸ್ಸಿನ ಮೇಲೆ ಸುರಿದ ಅಭಿಷೇಕವು ಅಲ್ಲಿಗೇ ನಿಂತುಬಿಡಲಿಲ್ಲ. ಶರೀರದ ಮೇಲೆಯೂ ಇಳಿದು ಬಂದಿತು. ಹಾಗೆಯೇ ಕ್ರಿಸ್ತನ ಮೇಲಿದ್ದ ಅಭಿಷೇಕವು ಆತನ ಶರೀರವಾಗಿರುವ ಮದಲಗಿತ್ತಿಯೂ ಹೊಂದಿಕೊಳ್ಳುವಳು. ನೀನು ಬಾಲವಾಗದೆ ತಲೆಯಾಗುವಿ. ಎಲ್ಲರಿಗಿಂತಲೂ ಮೇಲಾಗುವಿ ಎಂಬುದೇ ಕರ್ತನ ವಾಗ್ದಾನವಾಗಿದೆ (ಧರ್ಮೋ. 28:14). ತಲೆ ಎಂಬುದು ಒಂದು ಕಛೇರಿಯನ್ನು ನಡೆಸುವ ಅಧಿಕಾರಿಯನ್ನೂ ಜವಾಬ್ದಾರಿಯುತ ವ್ಯಕ್ತಿಯನ್ನು ಸೂಚಿಸುತ್ತದೆ. ಅವರು ತೆಗೆದುಕೊಳ್ಳುವ ತೀರ್ಮಾನವು ಕಾನೂನಿಗೆ ಅನ್ವಯಿಸುತ್ತದೆ.

ಅವರ ಕೈ ಕೆಳಗೆ ಗುಮಾಸ್ತರು ಜವಾನರು ಕೆಲಸ ಮಾಡುತ್ತಾರೆ. ತಲೆ ಹೋಗುವ ದಾರಿಯಲ್ಲೇ ಬಾಲವೂ ಹೋಗುವುದೇ ಹೊರತು ಬಾಲವನ್ನು ಹಿಂಬಾಲಿಸಿ ತಲೆ ಬರುವುದಿಲ್ಲ. ಈಗ ನೀವು ತಲೆಯಾಗಿ ಉನ್ನತಿಗೆ ಬರುವ ಹಾಗೆ ನಿಮ್ಮ ಶಿರಸ್ಸಿನ ಮೇಲೆ ಕರ್ತನ ಆಶೀರ್ವಾದಗಳು ಅಭಿಷೇಕಗಳೂ ಇಳಿದು ಬರಲಿ. ಸೇವಕರಾಗಿರುವ ನಾವು ನಿಮ್ಮ ತಲೆಯ ಮೇಲೆ ನಮ್ಮ ಕೈಗಳನ್ನಿಟ್ಟು ಪ್ರಾರ್ಥಿಸುವಾಗ ಪ್ರವಾದನೆಗಳು ಪ್ರಕಟವಾಗುವುದುಂಟು. ಶರೀರದಲ್ಲಿ ಅಶುದ್ಧಾತ್ಮಗಳು ಇರುವುದಾದರೆ ಅವು ಕೂಗಿಕೊಂಡು ಓಡಿ ಹೋಗುತ್ತವೆ. ಕೆಲವರ ಶಿರಸ್ಸಿನ ಮೇಲೆ ತಲೆಮಾರುಗಳಿಂದ ಬಂದ ಶಾಪಗಳಿರುತ್ತವೆ, ನಷ್ಟಗಳಿರುತ್ತವೆ ಕರ್ತನ ಶಕ್ತಿಯು ಬಲವಾಗಿ ಇಳಿದು ಅವುಗಳೆಲ್ಲವೂ ಮುರಿಯಲ್ಪಡುತ್ತವೆ.

ಕೆಲವರ ತಲೆಯ ಮೇಲೆ ಜ್ಞಾನವು ಇಳಿದು ಬರುತ್ತದೆ. ತಿಳುವಳಿಕೆ ಬುದ್ಧಿ ವಿವೇಕಗಳುಂಟಾಗುತ್ತವೆ. "ಅವು ನಿನ್ನ ತಲೆಗೆ ಅಂದದ ಪುಷ್ಪ ಕಿರೀಟ, ಕೊರಳಿಗೆ ಹಾರ (ಜ್ಞಾನೋ. 1:9). ಮದಲಿಂಗನಾದ ಕ್ರಿಸ್ತನ ಶಿರಸ್ಸು ಎಂಥದ್ದಾಗಿದೆ. ಆತನ ತಲೆಯ ಕೂದಲು ಬಿಳೀ ಉಣ್ಣೆಯಂತೆಯೂ ಹಿಮದಂತೆಯೂ ಬೆಳ್ಳಗಿತ್ತು. ಆತನ ಕಣ್ಣುಗಳು ಬೆಂಕಿಯ ಉರಿಯಂತೆಯೂ, ಆತನ ಪಾದಗಳು ಕುಲುಮೆಯಲ್ಲಿ ಕಾಯಿಸಿದ ತಾಮ್ರದಂತೆಯೂ ಆತನ ಧ್ವನಿಯು ಜಲಪ್ರವಾಹದ ಘೋಷದಂತೆಯೂ ಇದ್ದವು (ಪ್ರಕ. 1:14). ನಿನ್ನ ಶಿರಸ್ಸು ಕರ್ಮೆಲ್ ಬೆಟ್ಟದಂತೆ ಗಂಭೀರ. ನಿನ್ನ ತಲೆಯ ಕೂದಲು ಧೂಮ್ರ ವರ್ಣವು (ಪರಮ. 7:5).

ದೇವರ ಮಕ್ಕಳೇ, ಕರ್ತನು ನಿಮ್ಮ ಶಿರಸ್ಸಿನ ಮೇಲೆ ಅಭಿಷೇಕ

ನಿನಗೆ ವಿರೋಧವಾಗಿ ಪಾಪ ಮಾಡದಂತೆ ನಿನ್ನ ನುಡಿಗಳನ್ನು
ನನ್ನ ಹೃದಯದಲ್ಲಿಟ್ಟುಕೊಂಡಿದ್ದೇನೆ (ಕೀರ್ತ. 119:11).

ಕಿರೀಟವನ್ನಿಡಲು ಬಯಸುತ್ತಾನೆ. ಭೂಮಿಯಲ್ಲಿ ಶುಭವನ್ನೂ ಕೃಪೆಯನ್ನೂ ಅನುಗ್ರಹಿಸುತ್ತಾನೆ. ಘನದಿಂದಲೂ ಮಹಿಮೆಯಿಂದಲೂ ನಿಮ್ಮನ್ನು ಅಲಂಕರಿಸುತ್ತಾನೆ. ಪರಲೋಕಕ್ಕೆ ಹೋಗುವಾಗ ಅಲ್ಲಿ ಕರ್ತನು ನಿಮ್ಮ ಶಿರಸ್ಸಿನ ಮೇಲೆ ಜೀವ ಕಿರೀಟವನ್ನು ನೀತಿಯ ಕಿರೀಟವನ್ನೂ ಮಹಿಮೆಯ ಕಿರೀಟವನ್ನೂ ತೊಡಿಸಿ ಆನಂದಿಸುತ್ತಾನೆ. ಆದುದರಿಂದ ನಿಮ್ಮ ಶಿರಸ್ಸನ್ನು ಎಲ್ಲಾ ಕೇಡಿನಿಂದ ಕಾಪಾಡಿಕೊಳ್ಳಿರಿ. ದಾವೀದನನ್ನು ನಾಬಾಲನೆಂಬ ಮೂರ್ಖ ಮನುಷ್ಯನು ವಿನಾಕಾರಣವಾಗಿ ದೂಷಿಸಿದಾಗ ಆ ಕೇಡನ್ನು ಕರ್ತನು ಅವನ ತಲೆಯ ಮೇಲೆಯೇ ಬರಮಾಡಿದನು (1 ಸಮು. 25:39). ಅಪೊ. ಪೌಲನನ್ನು ಅಥೇನೆ ಪಟ್ಟಣದವರು ನಿಂದಿಸಿದಾಗ ಪೌಲನು ತನ್ನ ವಸ್ತ್ರಗಳನ್ನು ಝಾಡಿಸಿದನು. ನಿಮ್ಮ ನಾಶನಕ್ಕೆ ನೀವೇ ಹೊಣೆ ಅಂದನು (ಅ.ಕೃ. 18:6). ಅವನು ಮಾಡಿದ ಕುಯುಕ್ತಿ ಅವನ ತಲೆಯ ಮೇಲೆಯೇ ಬರುವುದು (ಕೀರ್ತ. 7:16).

ಅಪೊ. ಪೌಲನು ತನ್ನ ಆತ್ಮೀಕ ಮಗನಾದ ತಿಮೋಥೆಯನಿಗೆ ಬರೆಯುವಾಗ "ಅವಸರದಿಂದ ಯಾರ ತಲೆಯ ಮೇಲಾದರೂ ಹಸ್ತವನ್ನಿಟ್ಟು ಸಭೆಯ ಉದ್ಯೋಗಕ್ಕೆ ನೇಮಿಸಬೇಡ" (1 ತಿಮೊ. 5:22) ಎಂದು ಹೇಳುತ್ತಾನೆ. ದೇವಜನರೇ, ಪರಿಶುದ್ಧತೆಯನ್ನು ಕಾಪಾಡಿಕೊಳ್ಳಿರಿ. ನಿಮ್ಮ ಶಿರಸ್ಸಿನ ಮೇಲೆ ಬರುವ 5 ಮುಖ್ಯವಾದ ಆಶೀರ್ವಾದಗಳನ್ನು ಕುರಿತು ತಿಳಿಸಲು ಬಯಸುತ್ತೇನೆ.

1. **ಶಿರಸ್ಸಿನ ಮೇಲೆ ಪಾಪ ನಿವಾರಣೆ** :– ತರುವಾಯ ನೀನು ಆ ಟಗರುಗಳಲ್ಲಿ ಒಂದನ್ನು ತೆಗೆದುಕೊಂಡು ಆರೋನನೂ ಅವನ ಮಕ್ಕಳೂ ಅದರ ತಲೆಯ ಮೇಲೆ ಕೈಗಳನ್ನು ಇಟ್ಟ ನಂತರ (ವಿಮೋ. 29:15).

   ಹಳೆಯ ಒಡಂಬಡಿಕೆಯಲ್ಲಿ ಪಾಪ ನಿವಾರಣೆಗಾಗಿ ಇಸ್ರಾಯೇಲ್ಯರು ತಮ್ಮ ಕುಟುಂಬಕ್ಕೆಂದು ಒಂದು ಟಗರನ್ನು ತೆಗೆದುಕೊಂಡು ದೇವದರ್ಶನದ ಗುಡಾರದ ಅಂಗಳದಲ್ಲಿ ಯಜ್ಞವೇದಿಯ ಬಳಿ ತಂದು ಕಟ್ಟುವರು. ನಂತರ ಆ ಕುಟುಂಬದವರು ಆ ಟಗರಿನ ತಲೆಯ ಮೇಲೆ ತಮ್ಮ ಕೈಗಳನ್ನಿಟ್ಟು ತಾವು ಮಾಡಿದ ಎಲ್ಲಾ ಪಾಪಗಳನ್ನು ಅದರ ಮೇಲೆ ಹೊರಿಸುತ್ತಿದ್ದರು. ಆದಾದ ನಂತರ ಯಾಜಕನು ಅವರನ್ನು ನೋಡಿ "ನಿಮ್ಮ ಪಾಪಗಳನ್ನು ಈ ಕುರಿಯು ತನ್ನ ತಲೆಯ ಮೇಲೆ ಹೊತ್ತುಕೊಂಡಿದ್ದರಿಂದ ನಿಮ್ಮ ಪಾಪಗಳು ಪರಿಹಾರವಾಯಿತು" ಎಂದು ಹೇಳಿ ಅದನ್ನು ಕಡಿಯುವನು. ಹಿಸ್ಸೋಪ್ ಗಿಡದ ಬರಲಿನಿಂದ ಆ ರಕ್ತವನ್ನು ಪಾಪ ಮಾಡಿದ ಮನುಷ್ಯನ ಮೇಲೆ ಚಿಮುಕಿಸುವನು.

   ಯಾವನ ದ್ರೋಹವು ಪರಿಹಾರವಾಗಿದೆಯೋ ಯಾವನ ಪಾಪವು ಕ್ಷಮಿಸಲ್ಪಟ್ಟಿದೆಯೋ ಅವನೇ ಧನ್ಯನು (ಕೀರ್ತ. 32:1–2) ಎಂದು ಹೇಳಿ ಸಮಾಧಾನದಿಂದ ಕಳುಹಿಸುವನು (ಯಾಜ. 1:4, 8:14–22, 14:29). ಆದರೆ ಹೊಸ ಒಡಂಬಡಿಕೆಯಲ್ಲಿ ಯೇಸುಕ್ರಿಸ್ತನು ತಾನೇ ಲೋಕದ ಪಾಪವನ್ನೆಲ್ಲಾ ಹೊತ್ತುಕೊಂಡು ಯಜ್ಞದ ಕುರಿಯಾದನು (ಯೋಹಾ. 1:29). ಈತನು ತನ್ನ ಆತ್ಮವನ್ನು ಪ್ರಾಯಶ್ಚಿತ್ತಯಜ್ಞಕ್ಕಾಗಿ ಒಪ್ಪಿಸಿದನು (ಯೆಶಾ. 53:10). ಒಂದು ಸಾರಿ ಆತನ ತಲೆಯನ್ನು ಗಮನಿಸಿ ನೋಡಿರಿ. ಆ ಶಿರಸ್ಸಿನಲ್ಲಿ ಅನೇಕರ ಪಾಪವನ್ನು ಹೊತ್ತು ಕೊಂಡನು (ಯೆಶಾ. 53:12). ಅಪರಾಧಗಳನ್ನು ಹೊತ್ತು ಕೊಂಡನು (ಯೆಶಾ. 53:11). ಶ್ರಮ ಸಂಕಟಗಳನ್ನು ಹೊತ್ತು ಕೊಂಡನು (ಯೆಶಾ. 53:4). ವ್ಯಾಧಿಗಳನ್ನೂ ಬಲಹೀನತೆಗಳನ್ನು ಹೊತ್ತು ಕೊಂಡನು (ಮತ್ತಾ. 8:17). ಶಾಪಗಳನ್ನು ಹೊತ್ತುಕೊಂಡನು (ಗಲಾ. 3:14).

2. **ಶಿರಸ್ಸಿನ ಮೇಲೆ ಹಲವಾರು ಕಿರೀಟಗಳು** :– ಆತನ ತಲೆಯ ಮೇಲೆ ಕಿರೀಟಗಳಿದ್ದವು. ಆತನಿಗೆ ಒಂದು ಹೆಸರು ಬರೆದುಕೊಡಲ್ಪಟ್ಟಿದೆ. ಅದು ಆತನಿಗೆ ಹೊರತು ಮತ್ತಾರಿಗೂ ತಿಳಿಯದು. ಆತನಿಗೆ ದೇವರ ವಾಕ್ಯವೆಂದು ಹೆಸರು (ಪ್ರಕ. 19:12–13). ಹಳೆ ಒಡಂಬಡಿಕೆಯಲ್ಲಿ ಕುರಿಯನ್ನು ಬಲಿ ಕೊಡುತ್ತಿದ್ದರು. ಅಪೊಸ್ತಲ ಯೋಹಾನನು ಯೇಸುವಿನ ತಲೆಯಲ್ಲಿ ಮುಳ್ಳಿನ ಕಿರೀಟವನ್ನು ಕಂಡನು. ಆದರೆ ಪರಲೋಕ ದರ್ಶನದಲ್ಲಿ ಆತನ ತಲೆಯು ಮೇಲೆ ಅನೇಕ ಕಿರೀಟಗಳಿರುವುದನ್ನು ಕಂಡನು. ಸಾಧಾರಣವಾಗಿ ಒಬ್ಬ ಅರಸನಿಗೆ ಒಂದೇ ಕಿರೀಟವಿರುತ್ತದೆ. ಒಂದರ ಮೇಲೊಂದರಂತೆ ಅನೇಕ ಕಿರೀಟಗಳನ್ನು ಧರಿಸಿಕೊಳ್ಳುವುದಿಲ್ಲ. ಕ್ರಿಸ್ತನು ತನ್ನ ತಲೆಯ ಮೇಲಿರುವ ಅಷ್ಟೂ ಕಿರೀಟಗಳನ್ನು ನಿಮಗೆ ಕೊಡುವುದಕ್ಕಾಗಿಯೇ ಧರಿಸಿಕೊಂಡಿದ್ದಾನೆ. ನಿಮ್ಮ ಓಟವನ್ನು ಭಯಂಕರವಾಗಿ ಓಡಿ ಮುಗಿಸುವಾಗ ಆ ಕಿರೀಟವನ್ನು ನಿಮಗೆ ಕೊಡುತ್ತಾನೆ. ಸಾಮಾನ್ಯವಾಗಿ ಕಾಣುವ ಕಿರೀಟಗಳು ಉಂಟು. ಕಾಣದಿರುವ ಕಿರೀಟಗಳೂ ಉಂಟು. ಈ ಭೂಲೋಕದಲ್ಲಿ ಕರ್ತನು ನಿಮಗೆ ಪ್ರೀತಿ ಕೃಪೆಗಳೆಂಬ ಕಿರೀಟವನ್ನು ಕೊಡುವನು (ಕೀರ್ತ. 103:4). ಕಾಣದಂತಹ ಕಿರೀಟವಾದ ಮಾನ ಪ್ರಭಾವಗಳೆಂಬ ಕಿರೀಟಗಳಿವೆ (ಇಬ್ರಿ. 2:9). ಜ್ಞಾನವೆಂಬ ಕಿರೀಟ (ಜ್ಞಾನೋ. 4:7–9) ಎಂದು ಹಲವಾರು ಕಿರೀಟಗಳನ್ನು ನಿಮಗೆ ತೊಡಿಸಲು ಸಿದ್ಧಪಡಿಸಿಟ್ಟಿದ್ದಾನೆ. ನೀನು ಯೆಹೋವನ ಕೈಯಲ್ಲಿ ಸುಂದರ ಕಿರೀಟವಾಗಿಯೂ, ನಿನ್ನ ದೇವರ ಹಸ್ತದಲ್ಲಿ ರಾಜ ಶಿರೋವೇಷ್ಟನವಾಗಿಯೂ ಇರುವಿ (ಯೆಶಾ. 62:3).

ಅಪೊ. ಪೌಲನು ಫಿಲಿಪ್ಪಿಯವರನ್ನು ನೋಡಿ "ಪ್ರಿಯರೂ,

ಇಷ್ಟರೂ ಆದ ನನ್ನ ಸಹೋದರರೇ, ನನಗೆ ಸಂತೋಷವೂ ಜಯಮಾಲೆಯೂ ಆಗಿರುವವರೇ ಕರ್ತನಲ್ಲಿ ದೃಢವಾಗಿ ನಿಲ್ಲಿರಿ ಅನ್ನುತಾನೆ (ಫಿಲಿ. 4:1) ಅಂದನು. ನಮ್ಮ ಕರ್ತನಾದ ಯೇಸು ಪ್ರತ್ಯಕ್ಷನಾಗುವಾಗ ಆತನ ಮುಂದೆ ನಮ್ಮ ಭರವಸವೂ ನಮ್ಮ ಸಂತೋಷವೂ ನಾವು ಹೊಗಳಿಕೊಳ್ಳುವ ಜಯಮಾಲೆಯೂ ಯಾರು? ನೀವೇ ಅಲ್ಲವೇ? (1 ಥೆಸ. 2:19). ದೇವರ ಮಕ್ಕಳೇ, ಲೋಕದಲ್ಲಿ ನಿಮ್ಮ ಶಿರಸ್ಸಿನ ಮೇಲೆ ತೊಡಿಸುವ ಕಿರೀಟವು ಅಳಿದು ಹೋಗುವಂಥದ್ದು, ಮರೆತು ಹೋಗುವಂಥದ್ದು ಅಪೊ. ಪೌಲನು ಬರೆಯುತ್ತಾನೆ. ಹೋರಾಟ ಮಾಡುವವರೆಲ್ಲರೂ ಎಲ್ಲಾ ವಿಷಯಗಳಲ್ಲಿ ಮಿತಿಯುಲ್ಲಿರುತ್ತಾರೆ. ಅವರು ಬಾಡಿ ಹೋಗುವ ಜಯಮಾಲೆಯನ್ನು ಹೊಂದುವದಕ್ಕೆ ಪ್ರಯತ್ನ ಮಾಡುತ್ತಾರೆ. ನಾವಾದರೋ ಬಾಡಿ ಹೋಗದ ಜಯಮಾಲೆಯನ್ನು ಹೊಂದುವದಕ್ಕೆ ಸಾಧನೆ ಮಾಡುವವರಾಗಿದ್ದೇವೆ (1 ಕೊರಿ. 9:25). ನಾಶವಾಗದ ಜೀವ ಕಿರೀಟವನ್ನು ನೀವು ನಿಮ್ಮ ಶಿರಸ್ಸಿನ ಮೇಲೆ ಧರಿಸಬೇಕಾದ ಇಚ್ಛೆ ಆಶೆಗಳನ್ನು ತ್ಯಜಿಸುವುದು ಅತಿ ಅವಶ್ಯವಾಗಿದೆ. ಇಚ್ಛೆ ಎನ್ನುವುದು ತಪ್ಪಾದ ಆಶೆಗಳನ್ನು ಕುರಿತು ತಿಳಿಸುತ್ತದೆ. "ನೀವು ನಿಮ್ಮ ಹಿಂದಿನ ನಡತೆಯನ್ನು ಅನುಸರಿಸದೆ ಪೂರ್ವ ಸ್ವಭಾವವನ್ನು ತೆಗೆದು ಹಾಕಿಬಿಡಬೇಕು. ಅದು ಮೋಸಕರವಾದ ದುರಾಶೆಗಳಿಂದ ಕೆಟ್ಟು ಹೋಗುವಂಥದ್ದು (ಎಫೆ. 4:22:24). ಅಪೊ. ಪೌಲನು ತನ್ನ ಶಿರಸ್ಸಿನಲ್ಲಿ ನೀತಿಯ ಕಿರೀಟವನ್ನು ಧರಿಸುವ ದಿನಕ್ಕಾಗಿ ಕಾದಿದ್ದನು. ಶ್ರೇಷ್ಠ ಹೋರಾಟವನ್ನು ಮಾಡಿದ್ದೇನೆ. ನನ್ನ ಓಟವನ್ನು ಕೊನೆಗಾಣಿಸಿದ್ದೇನೆ, ಕ್ರಿಸ್ತ ನಂಬಿಕೆಯನ್ನು ಕಾಪಾಡಿಕೊಂಡಿದ್ದೇನೆ, ನೀತಿವಂತರಿಗೆ ದೊರಕುವ ಜಯಮಾಲೆಯು ಮುಂದೆ ನನಗೆ ಸಿದ್ಧವಾಗಿದೆ (2 ತಿಮೊ. 4:7–8).

3. **ಶಿರಸ್ಸಿನ ಮೇಲೆ ದೇವರ ದಯೆ** :– ಹೋರೇಬ್ ಬೆಟ್ಟದಲ್ಲಿನ ಮುಳ್ಳುಗಿಡದಲ್ಲಿ ವಾಸಿಸಿದಾತನ ದಯೆಯೂ ಯೋಸೇಫ್ ವಂಶದವರ ಪಾಲಿಗೆ ಬರಲಿ (ಧರ್ಮೋ. 33:16).

ಈ ಮೋಶೆಯು 40 ವರ್ಷಗಳ ಮೊದಲು ನಡೆದ ಒಂದು ಸಂಭವವನ್ನು ನೆನಪು ಮಾಡುತ್ತಾನೆ. ಅಲ್ಲಿ ಹೋರೇಬ್ ಬೆಟ್ಟದಲ್ಲಿ ಮುಳ್ಳಿನ ಪೊದೆ ಉರಿಯುತ್ತಿದ್ದರೂ ಅದು ಸುಟ್ಟು ಹೋಗಲಿಲ್ಲ. ಪರಲೋಕದ ಅಗ್ನಿ ಅದರ ಮೇಲೆ ಇಳಿಯುತ್ತಿತ್ತು. ಅದು ದೇವರ ದಯೆ. ಸುಟ್ಟು ಹೋಗದೆ ಇದ್ದದ್ದು ಇನ್ನೊಂದು ದಯೆ. ಅದರಲ್ಲಿ ದೇವರು ಮಾತನಾಡಿದ್ದುದು ಅತಿ ಶ್ರೇಷ್ಟವಾದ ದಯೆಯೂ ಹೌದು. ಯಾರೂ ಇಷ್ಟಪಡದ ಇತರರನ್ನು ಚುಚ್ಚಿ ಗಾಯುಗೊಳಿಸುವ ಶಾಪದ ಚಿಹ್ನೆಯಾಗಿರುವ ಮುಳ್ಳುಗಿಡದಲ್ಲಿ ಕರ್ತನು ಕಾಣಿಸಿಕೊಳ್ಳುವುದಾದರೆ ಈ ಮುಳ್ಳು ಗಿಡಕ್ಕೆ ದೇವರ ದಯೆ ಕಾರುಣ್ಯ ಕನಿಕರ ದೇವರ ಕೃಪೆ ದೊರಕಿದೆ ಎಂದೇ ಅರ್ಥ. ಈ ಆಶೀರ್ವಾದಗಳೆಲ್ಲವೂ ಯೋಸೇಫನ ಶಿರಸ್ಸಿನ ಮೇಲೆ ಬಂದವು.

ದಯೆಯಲ್ಲಿ ಎರಡು ಭಾಗಗಳಿವೆ. ಒಂದು ಮನುಷ್ಯನಿಂದ ಬರುವ ದಯೆ. ಇನ್ನೊಂದು ದೇವರಿಂದ ದೊರಕುವ ದಯೆ. ಯೇಸುಕ್ರಿಸ್ತನ ಮೇಲೆ ಈ ಎರಡೂ ದಯೆಯೂ ಇದ್ದವು. ಯೇಸು ಜ್ಞಾನದಲ್ಲಿಯೂ, ದೇಹ ಬಲದಲ್ಲಿಯೂ ವೃದ್ಧಿಯಾಗುತ್ತಾ ಬಂದನು. ಇದಲ್ಲದೆ ದೇವರ ದಯೆಯೂ ಮನುಷ್ಯರ ದಯೆಯೂ ಆತನ ಮೇಲೆ ಹೆಚ್ಚಾಗುತ್ತಾ ಬಂತು (ಲೂಕ. 2:52). ದೇವ ಕುಮಾರನಾಗಿದ್ದರೂ ಭೂಮಿಯಲ್ಲಿ ಹುಟ್ಟುವುದಕ್ಕೆ ಯೇಸುವಿಗೆ ಮರಿಯಳ ಗರ್ಭದ ದಯವು ಬೇಕಾಗಿತ್ತು. ಸುವಾರ್ತೆ ಸಾರಲು 12 ಜನ ಶಿಷ್ಯರ ದಯೆ ಬೇಕಾಗಿತ್ತು. ಸಮುದ್ರದ ದಡದಲ್ಲಿ ನಿಂತು ಪ್ರಸಂಗ ಮಾಡಲು ಪೇತ್ರನ ಹಡಗಿನ ಅಗತ್ಯವಿತ್ತು. ಆತನನ್ನು ಸಮಾಧಿಯಲ್ಲಿ ಹೂಣಿಡಲು ಅರಿಮಥಾಯದ ಯೋಸೇಫನ ದಯೆ ಬೇಕಾಗಿತ್ತು. ದೇವರ ಮಕ್ಕಳೇ ಕರ್ತನು ನಿಮಗೆ ದೇವರ ದಯೆಯನ್ನೂ ಮನುಷ್ಯರ ದಯೆಯನ್ನೂ ಸಿಗುವಂತೆ ಮಾಡುತ್ತಾನೆ.

ಯೋಸೇಫನಿಗೆ ಪೋಟಿಫರನ ದೃಷ್ಟಿಯಲ್ಲಿ ದಯೆ ದೊರಕಿತು. ಸೆರೆಮನೆಯ ಅಧಿಕಾರಿಯ ಕಣ್ಣುಗಳಲ್ಲಿ ದಯೆ ದೊರಕಿತು. ಮಾತ್ರವಲ್ಲ ಫರೋಹನ ಕಣ್ಣುಗಳಲ್ಲಿ ದಯೆ ದೊರಕಿತು. ಎಜ್ರನಿಗೆ, ದಾನಿಯೇಲನಿಗೆ, ನೆಹೆಮೀಯನಿಗೆ ದಯೆ ದೊರಕುವಂತೆ ಮಾಡಿದ ದೇವರು ನಿಶ್ಚಯವಾಗಿ ನಿಮಗೂ ದಯೆ ದೊರಕುವಂತೆ ಮಾಡುವನು.

4. **ಶಿರಸ್ಸಿನ ಮೇಲೆ ಅಭಿಷೇಕ** :– ಅದು ಆರೋನನ ತಲೆಯ ಮೇಲೆ ಹಾಕಲ್ಪಟ್ಟು ಅವನ ಗಡ್ಡದ ಮೇಲೆಯೂ ಅಲ್ಲಿಂದ ಅವನ ಅಂಗಿಗಳ ಕೊರಳಪಟ್ಟಿಯವರೆಗೂ ಹರಿದು ಬರುವ ಶ್ರೇಷ್ಠ ತೈಲದಂತೆಯೂ ಇದೆ (ಕೀರ್ತ. 133:2–3).

ಆರೋನನ ತಲೆಯ ಮೇಲೆ ಹಾಕಲ್ಪಟ್ಟು ಅಭಿಷೇಕಿಸಿದ್ದು ಸಾಧಾರಣವಾದುದಲ್ಲ. ಅದು ಪ್ರಧಾನ ಯಾಜಕನ ಅಭಿಷೇಕ. ತುಂಬಿ ಹೊರಸೂಸುವ ಅಭಿಷೇಕ. ಆ ಅಭಿಷೇಕ ಎಣ್ಣೆಯು ಶಿರಸ್ಸಿನ ಮೇಲಿನಿಂದ ಇಳಿದು ಅವನ ದಾಡಿ ಅಂಗಿ ಇಡೀ ಶರೀರದ ಮೇಲೆ ಇಳಿದು ಬಂದಿತು. ಈಗಲೂ ಆರೋನನಿಗಿಂತ ದೊಡ್ಡವನು ನಮ್ಮ ಮಧ್ಯದಲ್ಲಿ ಸಂಚರಿಸುತ್ತಿದ್ದಾನೆ. ದೇವರು ಯಾರನ್ನು ಕಳುಹಿಸಿದ್ದಾನೋ ಆತನಿಗೆ ಆತ್ಮವರವನ್ನು ಅಳತೆ ಮಾಡದೆ

ನನಗೆ ದೊರೆತ ನಿನ್ನ ಮಾತುಗಳನ್ನು ಆಹಾರ ಮಾಡಿಕೊಂಡೆನು, ನಿನ್ನ ನುಡಿಗಳು
ನನಗೆ ಹರ್ಷವೂ, ಹೃದಯಾನಂದವೂ ಆದವು (ಯೆರೆ. 15:16).

ಅನುಗ್ರಹಿಸುವದರಿಂದ ಆತನು ದೇವರ ಮಾತುಗಳನ್ನೇ ಆಡುತ್ತಾನೆ (ಯೋಹಾ. 3:34). ದೇವರು ನಜರೇತಿನ ಯೇಸುವನ್ನು ಪವಿತ್ರಾತ್ಮನಿಂದಲೂ ಬಲದಿಂದಲೂ ಅಭಿಷೇಕಿಸಿದನು. ದೇವರು ಆತನ ಸಂಗಡ ಇದ್ದದರಿಂದ ಆತನು ಉಪಕಾರಗಳನ್ನು ಮಾಡುತ್ತಾ ಸೈತಾನನಿಂದ ಬಾಧಿಸಲ್ಪಡುತ್ತಿರುವವರೆಲ್ಲರನ್ನು ಗುಣಮಾಡುತ್ತಾ ಸಂಚರಿಸಿದನು (ಅಪೊ. 10:38).

ಯೇಸುಕ್ರಿಸ್ತನು ಆ ಅಭಿಷೇಕವನ್ನು ನಿಮಗೆ ಕೊಡಲು ಬಯಸುತ್ತಾನೆ, ಕ್ರಿಸ್ತನು ಎಂಬ ಮಾತಿಗೆ ಅಭಿಷೇಕ ಮಾಡುವವನು ಎಂದರ್ಥ. ಆತನು ನಿಮ್ಮನ್ನು ಅಭಿಷೇಕಿಸಿ ಅರಸರನ್ನಾಗಿ ಯಾಜಕರನ್ನಾಗಿ ಇಟ್ಟಿದ್ದಾನೆ. ಸಂಸೋನನಂತೆ ಈ ಅಭಿಷೇಕವನ್ನು ಅಸಡ್ಡೆ ಮಾಡಬಾರದು. ಸೊಲೊಮೋನನು ಅನ್ಯ ಸ್ತ್ರೀಯರನ್ನು ಮೆಚ್ಚಿಸುವುದಕ್ಕಾಗಿ ವಿಗ್ರಹದ ದೇವಾಲಯವನ್ನು ಕಟ್ಟಿ ನಷ್ಟಪಡಿಸಿಕೊಂಡನು. ಕರ್ತನು ನಿಮ್ಮನ್ನು ಅಭಿಷೇಕಿಸಲು ಒಂದು ಉದ್ದೇಶ ಉಂಟು. ಯೇಸು ಹೇಳಿದ್ದು ನಿಮಗೆ ನಿಜನಿಜವಾಗಿ ಹೇಳುತ್ತೇನೆ ನನ್ನನ್ನು ನಂಬುವವನು ನಾನು ನಡಿಸುವ ಕ್ರಿಯೆಗಳನ್ನು ತಾನೂ ನಡಿಸುವನು ಮತ್ತು ಅವುಗಳಿಗಿಂತ ಮಹತ್ತಾದ ಕ್ರಿಯೆಗಳನ್ನು ನಡಿಸುವನು (ಯೋಹಾ. 14:12). ಹೌದು ನೀವು ಕ್ರಿಸ್ತನು ಮಾಡಿದ ಕ್ರಿಯೆಗಳನ್ನು ಮಾಡಬೇಕು. ಕರ್ತನಾದ ಯೆಹೋವನ ಆತ್ಮವು ನನ್ನ ಮೇಲೆ ಅದೆ. ಆತನು ನನ್ನನ್ನು ಬಡವರಿಗೆ ಶುಭವರ್ತಮಾನವನ್ನು ಸಾರಲು ಅಭಿಷೇಕಿಸಿದನು. ಮನಮುರಿದವರನ್ನು ಕಟ್ಟಿ ವಾಸಿ ಮಾಡುವುದಕ್ಕೂ ಸೆರೆಯವರಿಗೆ ಬಿಡುಗಡೆಯಾಗುವುದಕ್ಕೂ ಕಳುಹಿಸಿದ್ದಾನೆ (ಯೆಶಾ. 61:1–3).

5. **ಶಿರಸ್ಸಿನ ಮೇಲೆ ದೀಪ** :– ಆತನ ದೀಪವು ನನ್ನ ತಲೆಯ ಮೇಲೆ ಪ್ರಕಾಶಿಸುತ್ತಿತ್ತು. ಆತನ ಬೆಳಕಿನಿಂದ ಕತ್ತಲಲ್ಲೂ ಸಂಚರಿಸುತ್ತಿದ್ದೆನು (ಯೋಬ. 29:3).

ದೀಪ ಎನ್ನುವುದು ಆತ್ಮೀಕ ಕಣ್ಣುಗಳಾಗುತ್ತವೆ. ಕರ್ತನು ಕೊಡುವ ಪ್ರಕಟನೆಯ ವರಗಳಾಗಿವೆ. ಜ್ಞಾನವನ್ನು ಬೋಧಿಸುವ ವಚನಗಳು ನಮಗೆ ಆತ್ಮೀಕ ಕಣ್ಣುಗಳಾಗುತ್ತವೆ. ದೀಪವಾಗಿ ಬೆಳಗುತ್ತವೆ. ರಾತ್ರಿಯಲ್ಲಿ ಬೇಟೆಯಾಡಲು ಹೋಗುವ ಬೇಟೆಗಾರರು ತಮ್ಮ ತಲೆಯ ಮೇಲೆ ಪ್ರಕಾಶಮಾನವಾದ ಟಾರ್ಚ್ ಲೈಟನ್ನು ಕಟ್ಟಿಕೊಳ್ಳುತ್ತಾರೆ. ಅದರಿಂದ ಬರುವ ಬೆಳಕು ಕಾಡುಮೃಗಗಳು ಕಾಣಿಸುವಂತೆ ಮಾಡುತ್ತದೆ. ಜಿಂಕೆ ಬರುತ್ತಿದೆ, ಸಿಂಹ ಬರುತ್ತಿದೆ, ಹುಲಿ ಬರುತ್ತಿದೆ ಎನ್ನುತ್ತಾರೆ. ಕೆಳಗೆ ಹರಿದಾಡುತ್ತಿರುವ ಹಾವುಗಳನ್ನು ಕಂಡು ಪಕ್ಕಕ್ಕೆ ಸರಿದು ಕೊಳ್ಳುತ್ತಾರೆ. ರಾತ್ರಿಯಲ್ಲಿ ದೀಪವಾಗಿರುವ ಆ ಬೆಳಕು ಎಷ್ಟು ಒಳ್ಳೆಯದು. ಆಜ್ಞೆಯೇ ದೀಪ, ಉಪದೇಶವೇ ಬೆಳಕು (ಜ್ಞಾನೋ. 6:23). ಇದಲ್ಲದೆ ಪ್ರವಾದನ ವಾಕ್ಯವು ಮತ್ತೂ ದೃಢವಾಗಿದೆ. ನಿಮ್ಮ ಹೃದಯದೊಳಗೆ ಬೆಳ್ಳಿಯು ಮೂಡಿ ಅರುಣೋದಯವಾಗುವ ಪರ್ಯಂತರ ಅದನ್ನು ಕತ್ತಲೆಯಾದ ಸ್ಥಳದಲ್ಲಿ ಪ್ರಕಾಶಿಸುವ ದೀಪವೆಂದೆಣಿಸಿ ಅದಕ್ಕೆ ಲಕ್ಷ್ಯ ಕೊಡುವದೇ ಒಳ್ಳೇದು (2 ಪೇತ್ರ. 1:19).

ಅರಸನಾದ ದಾವೀದನು ಹೇಳುತ್ತಾನೆ "ನಿನ್ನ ವಾಕ್ಯವು ನನ್ನ ಕಾಲಿಗೆ ದೀಪವೂ, ದಾರಿಗೆ ಬೆಳಕೂ ಆಗಿದೆ" (ಕೀರ್ತ. 119:105). **'ನನ್ನ ಶತೃವೇ, ನನ್ನ ವಿಷಯದಲ್ಲಿ ಹಿಗ್ಗಬೇಡ; ನಾನು ಬಿದ್ದಿದ್ದರೂ ಏಳುವೆನು, ಕತ್ತಲಲ್ಲಿ ಕೂತಿದ್ದರೂ ಯೆಹೋವನು ನನಗೆ ಬೆಳಕಾಗಿರುವನು'** (ಮೀಕ. 7:8). ಕರ್ತನ ದೀಪವು ನಿಮ್ಮ ಶಿರಸ್ಸಿನ ಮೇಲೆ ಪ್ರಕಾಶವಾಗಿರಲಿ.

ಈಗಲೂ ಕರ್ತನ ಆಶೀರ್ವಾದಗಳು ಎಲ್ಲವೂ ನಿಮ್ಮ ಶಿರಸ್ಸಿನ ಮೇಲೆ ಇಳಿದು ಬರಲಿ. ಯೋಸೇಫನ ಆಶೀರ್ವಾದಗಳನ್ನು ಸ್ವತಂತ್ರಿಸಿಕೊಳ್ಳಿರಿ. ಯೋಸೇಫನಿಗೆ ಜ್ಯೇಷ್ಠಪುತ್ರ ಭಾಗವು ದೊರಕಿತು. ತಂದೆಯ ಆಶೀರ್ವಾದಗಳು ದೊರೆತವು. ಮೂಲಪಿತೃಗಳ ಆಶೀರ್ವಾದವು ಸಿಕ್ಕಿತು. ಪರಲೋಕ ಆಶೀರ್ವಾದಗಳು ದೊರಕಿದವು.

ಸಂಗ್ರಹ.

## ವಿಶೇಷ ಸೂಚನೆ

**ವಿಶ್ವಾಸದ ಮನೆಯ ಹೆಸರು ಹೇಳಿ ಆರ್ಥಿಕ ಸಹಾಯ ಕೇಳಿ ಬರುವುದಾದರೆ ಅವರು ನಮ್ಮವರೇ ಎಂದು ಖಚಿತಪಡಿಸುವುದಕ್ಕಾಗಿ ಕೆಳಕಂಡ ನಂಬರ್‌ಗಳಿಗೆ ವಿಚಾರಿಸಿರಿ. ವಿಶ್ವಾಸದ ಮನೆಗೆ ಹಣ ಕೊಡುವುದಾದರೆ ನೀವು ಅದರ ರಶೀದಿಯನ್ನು ಹಣ ಕೊಟ್ಟವರ ಬಳಿ ಕೇಳಿ ಪಡೆದುಕೊಳ್ಳಿ. ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : 0820200781, 9902334941, 9964070654, 08202559712.**

ನಿಶ್ಚಯವಾಗಿ ಯೆಹೋವನು ಚೀಯೋನನ್ನು ಅಪೇಕ್ಷಿಸಿ
ತನ್ನ ನಿವಾಸಕ್ಕಾಗಿ ಆರಿಸಿಕೊಂಡಿದ್ದಾನೆ (ಕೀರ್ತ. 132:13).

ಆರೋಗ್ಯ ಸ್ವರ

**ತಂಬುಳಿಯನ್ನು ತಂಪು ಪಾನೀಯದಂತೆಯೋ ಇಲ್ಲಾ ಸೂಪನಂತೆಯೋ ಕುಡಿಯಬಹುದು ಇಲ್ಲವೇ ಅನ್ನಕ್ಕೆ ಕಲಸಿ ತಿನ್ನಬಹುದು.**

**ತಂಬುಳಿಗಳ ಉಪಯೋಗಗಳು**

1. ದೇಹದ ಉಷ್ಣತೆಯು ಹೆಚ್ಚಾಗದಂತೆ ತಡೆಯುತ್ತವೆ. ಬಾಯಿ ಹುಣ್ಣು, ಕಣ್ಣುರಿ, ತಲೆ ಸಿಡಿತ, ಹೊಟ್ಟೆಯುರಿ, ಮಲಬದ್ಧತೆ, ಪಿತ್ತ, ಗ್ಯಾಸ್ಟಿಕ್ ಇಂತಹ ರೋಗಗಳಿಂದ ನಮ್ಮನ್ನು ದೂರವಿಡುತ್ತವೆ.
2. ಕಣ್ಣಿಗೆ, ಉದರಕ್ಕೆ ತಂಪಲ್ಲದೇ ನೆತ್ತಿಗೂ ತಂಪು ತರುತ್ತವೆ. ಎದೆಯುರಿ ಹೆಚ್ಚಾಗಿದ್ದರೆ, ಈ ತಂಬುಳಿಗಳನ್ನು ಮಾಡಿ ಕುಡಿದರೆ ಬಹು ಬೇಗ ಶಮನವಾಗುತ್ತದೆ.
3. ಆಯಾಸ ಹೆಚ್ಚಾದಾಗ, ಬಾಯಿರುಚಿ ಕೆಟ್ಟಿದೆ ಎಂದೆನಿಸಿದಾಗಲೂ ಇವು ಸಹಕಾರಿಯಾಗಿವೆ. ಬಹುಪಯೋಗಿ ತಂಬುಳಿಗಳ ಸೇವನೆಯಿಂದ ಆರೋಗ್ಯವು ಸುಧಾರಿಸುವುದಲ್ಲದೆ ಸದೃಢವಾಗಿರುವದು. ತಯಾರಿಸಲು ಕೂಡ ಸರಳ, ಸುಲಭ ಬೇಕಾಗುವ ಪದಾರ್ಥಗಳೂ ಅತ್ಯಂತ ಕಡಿಮೆ. ಆರೋಗ್ಯಕ್ಕೆ ಹಿತಕರ ಬಾಯಿಗೂ ರುಚಿಕರ ತಂಬುಳಿಗಳನ್ನು ತಯಾರಿಸುವ ವಿಧಾನವೂ ಹೆಚ್ಚು ಕಡಿಮೆ ಒಂದೇ ರೀತಿಯದ್ದಾಗಿರುತ್ತದೆ.

**ಕುಕ್ಕರ್ ಬಳಕೆಗೆ ಕಿವಿ ಮಾತು ಮಾಹಿತಿಗಳ ಅರಿವು ಇರಲೇಬೇಕಾದುದು ಅಗತ್ಯ. ಅದರಲ್ಲಿ ಕೆಲವು ಇಲ್ಲಿವೆ.**

- ಕುಕ್ಕರ್ ಉಪಯೋಗಿಸುವ ಮೊದಲು ಅದರ ಕೆಳಗಿನ ಪಾತ್ರೆಗೆ ನೀರು ಹಾಕುವುದನ್ನು ಮರೆಯಬೇಡಿ. ಒಂದು ವೇಳೆ ಮರೆತುಬಿಟ್ಟರೆ ಕುಕ್ಕರನ್ ಒಳಗಿನ ಅಧಿಕ ಒತ್ತಡದಿಂದ ಇಡೀ ಪಾತ್ರೆಯನ್ನೇ ಉಪಯೋಗಿಸದಿರುವ ಸ್ಥಿತಿ ತಲುಪಬಹುದು.
- ಕುಕ್ಕರನ್ನು ಗ್ಯಾಸ್‌ನಲ್ಲಿಟ್ಟ ನಂತರ ಎಷ್ಟು ಹೊತ್ತಾದರೂ ಪ್ರೆಷರ್ ಬಾರದಿದ್ದರೆ ಅದರ ಮುಚ್ಚಳವನ್ನು ತೆಗೆಯುವ ಗೋಜಿಗೆ ಹೋಗದೆ ಗ್ಯಾಸ್ ಆರಿಸಿಬಿಡಿ.
- ಕುಕ್ಕರನ ಪ್ರೆಷರ್ ಇಳಿಯುವ ಮುನ್ನ ಮುಚ್ಚಳ ತೆಗೆಯುವ ವ್ಯರ್ಥ ಪ್ರಯತ್ನಬೇಡ.
- ಗ್ಯಾಸ್ಕೇಟ್ ಸಡಿಲವಾಗಿ ಮುಚ್ಚಳದಿಂದ ನೀರು ಸೋರುತ್ತಿದ್ದರೆ ಅದನ್ನು ಬದಲಾಯಿಸಿ ಹೊಸದನ್ನು ಕೊಂಡುಕೊಳ್ಳಿ, ಇಲ್ಲದಿದ್ದರೆ ಅಧಿಕ ಇಂಧನ ವ್ಯಯವಾಗುತ್ತದೆ.
- ಯಾವುದೇ ಕಾರಣಕ್ಕೂ ಕುಕ್ಕರನ ಮುಚ್ಚಳದ ಮಧ್ಯದಲ್ಲಿರುವ ರಂಧ್ರವು ಮುಚ್ಚಿ ಹೋಗದಂತೆ ಜಾಗ್ರತೆ ವಹಿಸಿ. ಒಳಗಡೆ ಇರಿಸಿದ ತರಕಾರಿ, ಬೇಳೆಗಳಿಂದ ಆವಿ ಹೊರ ಹೋಗಬೇಕಾದ ರಂಧ್ರವು ಮುಚ್ಚಿ ಹೋದರೆ ಅಪಾಯವಾಗುವ ಸಾಧ್ಯತೆ ಹೆಚ್ಚು. ಕೆಲವು ವೇಳೆ ಅಂಥ ಸಮಯದಲ್ಲಿ ಸುರಕ್ಷಿತ ವಾಲ್ವ್‌ಗಳು ಹಾರಿ ಹೋಗಿ ಬೇಳೆ, ಅನ್ನದ ಅಗುಳುಗಳು ಮನೆಯ ಮಾಡಿನ ಮೇಲೆ ಸಂಗ್ರಹವಾಗುತ್ತವೆ.
- ಕುಕ್ಕರನ್ನು ಗ್ಯಾಸ್ ಮೇಲಿಟ್ಟು ಅದರಲ್ಲಿ ಪ್ರೆಷರ್ ಹೋಗಲು ಶುರುವಾದ ಮೇಲಷ್ಟೇ ವೇಯ್ಟನ್ನು ಇಟ್ಟರೆ ಒಳ್ಳೆಯದು.
- ವೇಯ್ಟನ್ನು ಕೆಳಗೆ ಬೀಳಿಸದೆ ಅತ್ಯಂತ ಜಾಗರೂಕತೆಯಿಂದ ಅದರ ಸ್ಥಾನದಲ್ಲಿಡಿ.
- ಕುಕ್ಕರನಲ್ಲಿಟ್ಟ ಪದಾರ್ಥಗಳು ಗಟ್ಟಿಯಾಗಿದ್ದು ತುಂಬಾ ಹೊತ್ತು ಬೇಯಬೇಕಿದ್ದರೆ ಒಂದು ಶಿಳ್ಳೆ ಹೊಡೆದ ತಕ್ಷಣ ಕಡಿಮೆ ಬೆಂಕಿಯಲ್ಲಿ ಬೇಯಿಸಿ. ಇದರಿಂದ ಗ್ಯಾಸ್ ಉಳಿತಾಯವಾಗುತ್ತದೆ.
- ಬೇಳೆ ಕಾಳುಗಳನ್ನು ಒಂದೇ ಸಲ ಕುಕ್ಕರ್‌ಗೆ ಹಾಕಿ ಬೇಯಿಸುವ ಬದಲು ಅವುಗಳನ್ನು ಕುದಿಯುವ ನೀರಿನಲ್ಲಿ ಹಾಕಿ ಸ್ವಲ್ಪ ಹೊತ್ತು ಮುಚ್ಚಿಡಿ ನಂತರ ಅದನ್ನು ಕುಕ್ಕರ್‌ನಲ್ಲಿ ಬೇಯಿಸಿದರೆ ಅದು ಚೆನ್ನಾಗಿ ಬೇಯುವುದರ ಜೊತೆಗೆ ಗ್ಯಾಸ್‌ನ ಖರ್ಚು ಕಡಿಮೆಯಾಗುತ್ತದೆ.
- ಕುಕ್ಕರ್‌ನ ಮುಚ್ಚಳವನ್ನು ಸಡಿಲಿಸುವಾಗ ನಿಮ್ಮ ಮುಖವನ್ನು ಅದರಿಂದ ಸಾಕಷ್ಟು ದೂರದಲ್ಲಿಡಿ. ಇದಲ್ಲದಿದ್ದರೆ ಒಮ್ಮೆಲೆ ಹೊರ ಬರುವ ಹಬೆಯಿಂದ ನಿಮ್ಮ ಮುಖ ಸುಟ್ಟು ಹೋಗಬಹುದು.
- ಗ್ಯಾಸ್ಕೇಟನ್ನು ಬಳಸಿದ ನಂತರ ಅದನ್ನು ನೀರು ತುಂಬಿದ ಬಕೆಟ್‌ನಲ್ಲಿ ಹಾಕಿಡಿ.
- ಮನೆಯಲ್ಲಿ ರೆಫ್ರಿಜರೇಟರ್ ಇದ್ದರೆ ಸಡಿಲವಾದ ಗ್ಯಾಸ್ಕೇಟನ್ನು ಫ್ರೀಜರ್‌ನಲ್ಲಿಟ್ಟರೆ ನಂತರ ಅದು ಬಿಗಿಯಾಗಿ ಮುಚ್ಚಳದಲ್ಲಿ ಕುಳಿತುಕೊಳ್ಳುತ್ತದೆ.
- ಕುಕ್ಕರ್‌ನ ಕೆಳಭಾಗದ ಪಾತ್ರೆಯು ಸ್ವಲ್ಪ ಸಮಯದ ನಂತರ ಕಂದು ಬಣ್ಣಕ್ಕೆ ತಿರುಗಿ ಬಿಡುತ್ತದೆ. ಇದನ್ನು ತಪ್ಪಿಸಲು ಗೋಲಿ ಗಾತ್ರದ ಹುಣಸೆ ಹಣ್ಣನ್ನು ಕೆಳಗಿನ ಪಾತ್ರೆಗೆ ಹಾಕಿ ನೀರು ಹಾಕಿ ಕುಕ್ಕರ್ ಉಪಯೋಗಿಸಿದರೆ ಅದು ಮತ್ತೆ ಹೊಳಪನ್ನು

ಪಡೆದುಕೊಳ್ಳುತ್ತದೆ.

- ಮಾಡಬೇಕಾಗಿರುವ ಅಡುಗೆಯ ಪ್ರಮಾಣ ಕಡಿಮೆಯಿದ್ದರೆ ದೊಡ್ಡ ಕುಕ್ಕರನ್ನು ಬಳಸದೆ ಪ್ಯಾನ್ ಅಥವಾ ಕಡಿಮೆ ಸಾಮರ್ಥ್ಯದ ಕುಕ್ಕರಗಳನ್ನು ಬಳಸಿ.
- ಕುಕ್ಕರ್‌ನಲ್ಲಿ ಮಾಡಿದ ಅನ್ನ ಬಸಿದು ಮಾಡುವ ಅನ್ನದಂತಿರುವುದಿಲ್ಲ ಎಂಬ ಕಾರಣದಿಂದ ಕೆಲವರು ಕುಕ್ಕರ ಬಳಸದೇ ಅನ್ನ ಮಾಡುವುದರಿಂದ ಇಂಧನ ವ್ಯಯದ ಜೊತೆಗೆ ಸಮಯದ ಬಳಕೆಯೂ ಹೆಚ್ಚು ಅದರ ಬದಲು ಅಕ್ಕಿಯನ್ನು ತೊಳೆದು ಎಷ್ಟು ಬೇಕೋ ಅಷ್ಟು ನೀರು ಹಾಕಿ ವೇಯ್ಟ್‌ನ್ನು ಇಡದೆ 20 ನಿಮಿಷ ಬೇಯಿಸಿದರೆ ಅನ್ನ ಉದುರುದುರಾಗಿ ಬಸಿದ ಅನ್ನದಂತೇ ಇರುತ್ತದೆ.
- ಇತ್ತೀಚೆಗೆ ಇಂಧನವೂ ತುಟ್ಟಿಯಾಗುತ್ತಿರುವುದರಿಂದ ನಾವು ಕುಕ್ಕರನ ಸರಿಯಾದ ಬಳಕೆಯ ಜೊತೆಜೊತೆಗೆ ಇಂಧನದ ಉಳಿತಾಯದ ಬಗ್ಗೆಯೂ ಅತ್ಯಂತ ಕಾಳಜಿ ವಹಿಸಬೇಕಾಗಿದೆ.

*ಸಂಗ್ರಹ*

---

# ಡಿಜಿಎಮ್ ಬೇತೇಲ್ 24 ಗಂಟೆಯ ಪ್ರಾರ್ಥನಾ ಗೋಪುರ

ಪ್ರತಿ ಸೋಮವಾರ ಬೆಳಿಗ್ಗೆ 10:00 ಗಂಟೆಯಿಂದ ಮಧ್ಯಾಹ್ನ 01.00 ಗಂಟೆಯವರೆಗೆ ಹಾಗೂ ಸಂಜೆ 4.00 ಗಂಟೆಯಿಂದ 7.00 ಗಂಟೆಯವರೆಗೆ **ಮಧ್ಯಸ್ಥಿಕೆಯ ಪ್ರಾರ್ಥನೆ.**

ಪ್ರತಿ ಬುಧುವಾರ ಬೆಳಿಗ್ಗೆ 10:00 ಗಂಟೆಯಿಂದ ಮಧ್ಯಾಹ್ನ 01.00 ಗಂಟೆಯವರೆಗೆ ಹಾಗೂ ಸಂಜೆ 4.00 ಗಂಟೆಯಿಂದ 7.00 ಗಂಟೆಯವರೆಗೆ **ಸ್ವಸ್ಥತೆಯ ಪ್ರಾರ್ಥನೆ.**

ಪ್ರತಿ ಶನಿವಾರ ಬೆಳಿಗ್ಗೆ 10:00 ಗಂಟೆಯಿಂದ ಮಧ್ಯಾಹ್ನ 01.00 ಗಂಟೆಯವರೆಗೆ ಹಾಗೂ ಸಂಜೆ 4.00 ಗಂಟೆಯಿಂದ 7.00 ಗಂಟೆಯವರೆಗೆ **ಸ್ವಸ್ಥತೆ ಹಾಗೂ ಬಿಡುಗಡೆಯ ಪ್ರಾರ್ಥನೆ.**

ಪ್ರಾರ್ಥನಾ ಗೋಪುರದ ವಿಳಾಸ :

**ಡಿಜಿಎಮ್ ಬೇತೇಲ್ 24 ಗಂಟೆಯ ಪ್ರಾರ್ಥನಾ ಗೋಪುರ,**
**ರಕ್ಷಣಾಪುರ ಕಂಪೌಂಡ್, ಇನ್ನಂಜೆ ಗ್ರಾಮ, ಉಡುಪಿ – 574115. ದೂರವಾಣಿ : 0820 2559886**

---

## ಡಿಜಿಎಮ್ ಬೇತೇಲ್ ಅಂಕಣ

- **ಮೇ 25 ರಿಂದ ಜುಲೈ 03ರವರೆಗೆ 40 ದಿವಸದ ಬಿಡುಗಡೆ, ಸ್ವಸ್ಥತೆಯ ಹಾಗೂ ಉಪವಾಸ ಕೂಟವನ್ನು ಡಿಜಿಎಮ್ ಬೇತೇಲ್ ಚರ್ಚ್, ಯೇಸುಪುರ, ಶಂಕರಪುರ ಉಡುಪಿಯಲ್ಲಿ ಏರ್ಪಡಿಸಲಾಗಿದೆ.**
- **10 ನೇ ಕೆರೀತ್ ಕೂಟವು ಕರ್ತನ ಕೃಪೆಯಿಂದ ಒಳ್ಳೆ ರೀತಿಯಲ್ಲಿ ನಡೆಸಲ್ಪಟ್ಟಿತು.**
- **ಆಗಸ್ಟ್ 17 ರಿಂದ 26ರವರೆಗೆ 11ನೇ ಕೆರೀತ್ ಕೂಟವು ನಡೆಸಲ್ಪಡುವದು.**
- **ವಿಶ್ವಾಸದಮನೆಯಲ್ಲಿ ವೈದ್ಯಕೀಯ ಶುಶ್ರೂಷೆ ಮತ್ತು ಆರೈಕೆಯನ್ನು ಹೊಂದಿ ಸಂಪೂರ್ಣ ಗುಣಮುಖರಾದ ಸಹೋ। ಪ್ರೀತಮ್ ದಾಸರವರು ಉತ್ತರಪ್ರದೇಶದಲ್ಲಿರುವ ತಮ್ಮ ಕುಟುಂಬಕ್ಕೆ ಮರಳಿ ಸೇರಿದ್ದಾರೆ.**

ನಿನ್ನ ವಾಕ್ಯಾನುಸಾರವಾಗಿ ನನಗೆ ಜ್ಞಾನವನ್ನು ದಯಪಾಲಿಸು (ಕೀರ್ತ. 119:169).

## ವಿಶ್ವಾಸದ ಮನೆ ಅನಾಥಾಶ್ರಮದ ಸೇವೆಯಲ್ಲಿ ನೀವು ಪಾಲುದಾರರಾಗಲು ಬಯಸುವಿರಾ

1. ಪ್ರಾರ್ಥನೆಯ ಮೂಲಕ ಸಹಾಯ ಮಾಡಬಹುದು.
2. ಆರ್ಥಿಕವಾಗಿ ಸಹಾಯ ನೀಡಬಹುದು
3. ವಸ್ತುಗಳ ರೂಪದಲ್ಲಿ ಸಹಾಯ ನೀಡಬಹುದು.

**ಆರ್ಥಿಕ ಸಹಾಯ ನೀಡಲಿಚ್ಛಿಸುವವರು :**

| | | | |
|---|---|---|---|
| ತಿಂಗಳಿಗೊಮ್ಮೆ | ರೂ. 500/– | ಆರು ತಿಂಗಳಿಗೊಮ್ಮೆ | ರೂ. 6000/– |
| ಮೂರು ತಿಂಗಳಿಗೊಮ್ಮೆ | ರೂ. 2000/– | ವರ್ಷಕ್ಕೊಮ್ಮೆ | ರೂ. 8000/– |

ದಯವಿಟ್ಟು ನಮ್ಮನ್ನು ಸಂಪರ್ಕಿಸಿರಿ ಹಾಗೂ ಅನಾಥರ ಸೇವೆಯಲ್ಲಿ ನಮ್ಮೊಂದಿಗೆ ಕೈ ಜೋಡಿಸಿರಿ.

**ಮೊಬೈಲ್ : 9902334941**

## ನಿಮ್ಮಗೆಲ್ಲಾ ಸಂತಸ ಸುದ್ಧಿ

# VOICE OF GOD
(ದೇವರ ಸ್ವರ)

ಈಗಾಗಲೇ VOICE OF GOD ಆಂಗ್ಲ ಮಾಸ ಪತ್ರಿಕೆಯು ಪ್ರಕಟವಾಗಿರುತ್ತದೆ. ಇದನ್ನು ಬಯಸುವವರು ನಿಮ್ಮ ವಿಳಾಸ ನಮಗೆ ಬರೆದು ಕಳುಹಿಸಿ ರೂ. 150 ವಾರ್ಷಿಕ ಚಂದಾ ಹಣವನ್ನು ಭರಿಸಬಹುದು. ದಯಮಾಡಿ ತಾವೆಲ್ಲರೂ ಈ ಮಾಸ ಪತ್ರಿಕೆಗಾಗಿ ಪ್ರಾರ್ಥಿಸಬೇಕು ಹಾಗೂ ತಮ್ಮಿಂದ ಆಗುವ ಸಹಕಾರವನ್ನು ಕೊಡಬೇಕಾಗಿ ತಮ್ಮಲ್ಲಿ ವಿನಂತಿಸುತ್ತೇವೆ ನಿಮ್ಮ ನೆಚ್ಚಿನ ಸ್ನೇಹಿತರು, ಬಂಧುಗಳ ವಿಳಾಸವನ್ನು ನಮಗೆ ಕಳುಹಿಸಿ ಅವರ ವಾರ್ಷಿಕ ಚಂದಾವನ್ನು ತಾವು ಭರಿಸಿದ್ದಾಗಿದಲ್ಲಿ ಅವರೆಲ್ಲರೂ ಆತ್ಮೀಕ ಪ್ರಯೋಜನ ಪಡೆದುಕೊಳ್ಳಲು ಸಾಧ್ಯ. ಪರಲೋಕದಿಂದ ತಾವೆಲ್ಲರೂ ಪ್ರತಿಫಲ ಹೊಂದಿಕೊಳ್ಳುವಿರಿ. ತಮ್ಮ ಪ್ರತಿಗಳನ್ನು ಕಾಯ್ದಿರಿಸಿಕೊಳ್ಳಿ.

**ಆಶ್ರಮದ ಅವಶ್ಯಕತೆಗಳು**

1. ವಾಷಿಂಗ್ ಮಿಷನ್ (500ಕೆ.ಜಿ.).
2. ಜನರೇಟರ್
3. 100 ಮಂಚ, ಹೊದಿಕೆಗಳು 100, ತಲೆದಿಂಬು 100, ಬೆಡ್‌ಶೀಟ್.
4. ಕುಡಿಯವ ನೀರಿನ ಫಿಲ್ಟರ್.

ದಾನಿಗಳು ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ :

**9902334941, 08202002781, 09964070654.**

ಭೂಮ್ಯಾಕಾಶಗಳನ್ನು ಉಂಟುಮಾಡಿದ ಯೆಹೋವನ ನಾಮದಲ್ಲಿ ನಮಗೆ ರಕ್ಷಣೆಯಾಗುವದು (ಕೀರ್ತ. 124:8).

# ನೀತಿವಂತನ ಆಶೀರ್ವಾದಗಳು

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

ಈ ಸಹೋದರನು ತನ್ನ ಟೈಲರ್ ಅಂಗಡಿಯಲ್ಲಿ ಒಂದು ಸತ್ಯವೇದವನ್ನು ಇಟ್ಟುಕೊಂಡು ಕ್ರಿಸ್ತನ ಆಜ್ಞೆಯಂತೆ ಬರುವವರಿಗೆ ಸುವಾರ್ತೆ ಹೇಳಿ ಪ್ರಾರ್ಥಿಸುತ್ತಿದ್ದರು. ಈ ವಿಷಯ ಧರ್ಮದ ಮುಖಂಡರಿಗೆ ತಿಳಿಯಿತು. ಒಂದು ಸಂಜೆ ಸುಮಾರು 7.30ಕ್ಕೆ ಅಯ್ಯಾ (ಪಾದ್ರಿ)ಯವರು 4 ಜನ ಹಿರಿಯರ ಜೊತೆಯಲ್ಲಿ ಇವರ ಮನೆಗೆ ಬಂದರು. ಇವರನ್ನು ಕುಳಿತುಕ್ಕೋಳಿಸಿ ಬಂದ ವಿಷಯ ಏನು ಎಂದು ಇವರು ಕೇಳಿದರು ಆಗ ಧಾರ್ಮಿಕ ಮುಖಂಡರು ನೀನು ಏನೋ ಸುವಾರ್ತೆ ಸುವಾರ್ತೆ ಅಂಥ ಬೈಬಲ್ ಬಗ್ಗೆ ಜನರಿಗೆ ಹೇಳುತ್ತಾ ಇದ್ದೀ ಎಂದು ಹೇಳಿದರು. ಆಗ ಇವರು ಹೌದು ಸತ್ಯವೇದದಲ್ಲಿ ಮತ್ತಾ. 28:18–20 ರಲ್ಲಿ ಎಲ್ಲಾ ಜನರಿಗೆ ಸುವಾರ್ತೆಯನ್ನು ಸಾರಲು ಯೇಸುಕ್ರಿಸ್ತನು ಹೇಳಿದ್ದಾನಲ್ಲಾ ನಾನು ಅದನ್ನೇ ಮಾಡುತ್ತಿದ್ದೇನೆ ಎಂದು ಇವರು ಹೇಳಿದರು. ಆಗ ಧಾರ್ಮಿಕ ಮುಖಂಡರು ಸರಿ ನೀನು ಅನ್ಯಜನರಿಗೆ ಸುವಾರ್ತೆ ಹೇಳು ಯಾಕೆ ಕ್ರೈಸ್ತರಿಗೆ ಹೇಳುತ್ತಿ ಎಂದು ಕೇಳಿದರು. ಇವರಿಗೆ ಧಾರ್ಮಿಕ ಮುಖಂಡರ ಸಮಸ್ಯೆ ತಿಳಿಯಿತು. ಪಾದ್ರಿಯವರ ಜೊತೆಯಲ್ಲಿ ಬಂದಂತಹ 4 ಜನ ಹಿರಿಯರಿಗೆ ಕೆಲವು ಸತ್ಯವೇದದಲ್ಲಿರುವ ಪ್ರಶ್ನೆಗಳನ್ನು ಕೇಳಿದರು. ಮೊದಲನೆಯವರಿಗೆ ಸತ್ಯವೇದದಲ್ಲಿ ಎಷ್ಟು ಪುಸ್ತಕಗಳಿವೆ ಎಂದು ಕೇಳಲು ಉತ್ತರ ಹೇಳಲು ಅವರು ತಡವರಿಸಿದರು. 2ನೇಯವರಿಗೆ ಯೇಸುಕ್ರಿಸ್ತನು ಹೊಸ ಒಡಂಬಡಿಕೆಯಲ್ಲಿ ಬಂದದ್ದೋ? ಹಳೆ ಒಡಂಬಡಿಕೆಯಲ್ಲಿ ಬಂದದ್ದೋ ಎಂದು ಕೇಳಲು ಅವರು ಈ ಸಾಮಾನ್ಯ ಪ್ರಶ್ನೆಗೆ ಉತ್ತರ ಕೊಡಲಾಗಲಿಲ್ಲ. 3ನೇಯವರಿಗೆ ಗಬ್ರಿಯೇಲ ದೂತನು ಮರಿಯಳಿಗೆ ಸಂದೇಶ ತಂದ ವಿಷಯ ಸತ್ಯವೇದದಲ್ಲಿ ಯಾವ ಪುಸ್ತಕದಲ್ಲಿದೆ ಎಂದು ಕೇಳಿದರು ಅವರು ಉತ್ತರಿಸಲು ಸಾಧ್ಯವಾಗಲಿಲ್ಲ, ಕೊನೆಗೆ 4ನೇಯವರಿಗೆ ಯೇಸುಕ್ರಿಸ್ತನ ಜೊತೆಯಲ್ಲಿ ಎಷ್ಟು ಜನ ಶಿಷ್ಯರಿದ್ದರು? ಅವರ ಹೆಸರುಗಳೇನು ಎಂದು ಕೇಳಲು ಅವರಿಗೂ ಉತ್ತರ ಹೇಳಲು ಸಾಧ್ಯವಾಗಲಿಲ್ಲ. ಕೊನೆಗೆ ಅಯ್ಯ (ಪಾದ್ರಿಯವರನ್ನು) ನೋಡಿ ಈಗ ನೀವೇ ತೀರ್ಮಾನ ಮಾಡಿ ನಾನು ಅನ್ಯರಿಗೆ ಸುವಾರ್ತೆ ಹೇಳಬೇಕೋ, ಕ್ರೈಸ್ತರಿಗೆ ಹೇಳಬೇಕೋ ಎಂದು ಹೇಳಿದರು ಎಲ್ಲರೂ ನಾಚಿಕೆಯಿಂದ ಅಲ್ಲಿಂದ ಹೊರಟು ಹೋಗಬೇಕಾಯಿತು. ಇಂದು ಸತ್ಯವೇದದ ಸತ್ಯಗಳನ್ನು ಜನರಿಗೆ ತಿಳಿಸದೆ, ಉಪದೇಶಿಸದೆ ಧರ್ಮದ ನಿಯಮಗಳನ್ನು ಬೋಧಿಸಿ ಜನರನ್ನು ಬಂಧಿಸಿಡುತ್ತಾರೆ. ಹೇಗೆ ಒಬ್ಬ ವ್ಯಕ್ತಿಯ ಆತ್ಮೀಕ ಕಣ್ಣುಗಳು ತೆರೆದು ಸತ್ಯ ತಿಳುಕೊಂಡಾಗ ಅವನನ್ನು ನಿಯಂತ್ರಿಸಲು ನೋಡುತ್ತಾರೆ ಅಥವಾ ಅಂಥ ವ್ಯಕ್ತಿಯೊಂದಿಗೆ ಇತರರು ಸೇರದಂತೆ ನೋಡಿಕೊಳ್ಳುವುದು ಮಾತ್ರವಲ್ಲ ಅಂಥವರನ್ನು ಸಭೆಯಿಂದ ಬಹಿಷ್ಕಾರ ಹಾಕುತ್ತಾರೆ. ಯೇಸು ಹೇಳಿದ್ದು, ಯೋಹಾ. 16:1–4 ರಲ್ಲಿ "ನೀವು ಧೈರ್ಯಗೆಟ್ಟು ಹಿಂಜರಿಯಬಾರದೆಂದು ಇದನ್ನೆಲ್ಲಾ ನಿಮಗೆ ಹೇಳಿದ್ದೇನೆ. ನಿಮಗೆ ಬಹಿಷ್ಕಾರ ಹಾಕುವರು; ಅದಲ್ಲದೆ ನಿಮ್ಮನ್ನು ಕೊಲ್ಲುವವನು ತಾನು ದೇವರಿಗೆ ಯಜ್ಞವನ್ನು ಮಾಡಿದ್ದೇನೆಂದು ನೆನಸುವ ಕಾಲ ಬರುತ್ತದೆ. ಅವರು ತಂದೆಯನ್ನಾದರೂ ನನ್ನನ್ನಾದರೂ ತಿಳಿಯದವ ರಾಗಿರುವದರಿಂದ ಇಂಥದನ್ನು ನಿಮಗೆ ಮಾಡುವರು. ಆ ಕಾಲ ಬಂದಾಗ ಆತನು ನಮಗೆ ಇಂಥಿಂಥದನ್ನು ಹೇಳಿದನಲ್ಲಾ ಎಂದು ನೀವು ನೆನಪಿಗೆ ತರುವಂತೆ ನಿಮ್ಮ ಸಂಗಡ ಈ ಮಾತುಗಳನ್ನು ಆಡಿದ್ದೇನೆ" ಇಂದು ತಿಂಗಳುಗಟ್ಟಲೆ, ವರ್ಷಗಟ್ಟಲೆ ಚರ್ಚಿಗೆ ಬಾರದೆ ಪಾಪದಲ್ಲಿ, ಜೂಜಿನಲ್ಲಿ, ಕುಡಿಕತನದಲ್ಲಿ ಅನೇಕ ಅಕ್ರಮಗಳಲ್ಲಿ ಬಿದ್ದು ಹೊರಳಾಡುವಂತಹ ವ್ಯಕ್ತಿಗಳ ಬಗ್ಗೆ ಅನೇಕರಿಗೆ ಕಾಳಜಿ ಇಲ್ಲ. ಅವರ ಧಾರ್ಮಿಕ ನಿಯಮಗಳು ಅಂಥ ವ್ಯಕ್ತಿಗಳನ್ನು ಬದಲಾಯಿಸಲು ಸಾಧ್ಯವಿಲ್ಲ. ಆದರೆ ಈ ವ್ಯಕ್ತಿಗಳು ಜೀವವುಳ್ಳ ದೇವರ ವಾಕ್ಯವನ್ನು ಕೇಳಿ ಪಾಪಗಳಿಗೆ ಪಶ್ಚಾತ್ತಾಪಪಟ್ಟು ಹೊಸ ಮನುಷ್ಯರಾಗಿ ಬದಲಾಗಿ ಆತ್ಮದಿಂದಲೂ ಸತ್ಯದಿಂದಲೂ ಕರ್ತನಾದ ಯೇಸುವನ್ನು ಆರಾಧಿಸಲು ಹೋಗುವಾಗ ತಮ್ಮಿಂದ ಆಗುವಂತಹ ತಡೆಗಳನ್ನು ಮಾಡುತ್ತಾರೆ. ಯೇಸುವಿಗೆ ಮುಖ್ಯ ಮತ ಧರ್ಮವಲ್ಲ ಪ್ರಿಯರೇ, ಆತನಿಗೆ ಮುಖ್ಯ ಜನರ ಆತ್ಮ ರಕ್ಷಣೆಯಾಗಿದೆ ಈ ಸತ್ಯವನ್ನು ನೀನು ಅರಿತರೆ ನೀನು ಧರ್ಮದ, ಪಾಪದ, ಗುಲಾಮತನದಿಂದ ಬಿಡುಗಡೆಯಾಗುವಿ ದೇವರು ತಾನೇ ನಿನಗೆ ಆ ತಿಳುವಳಿಕೆ ಕೊಡಲಿ. "ಆಗ ಯೇಸು ನಾನು ನ್ಯಾಯತೀರ್ಪಿಗಾಗಿ ಈ ಲೋಕಕ್ಕೆ ಬಂದಿದ್ದೇನೆ; ಆ ತೀರ್ಪು ಏನೆಂದರೆ, ಕಣ್ಣಿಲ್ಲದವರಿಗೆ ಕಣ್ಣು ಬರುವವು, ಕಣ್ಣಿದ್ದವರು ಕುರುಡರಾಗುವರು ಅಂದನು. ಇದನ್ನು ಆತನ ಸಂಗಡ

ಅವನು ಅಸ್ವಸ್ಥನಾಗಿ ಬಿದ್ದುಕೊಂಡಿರುವಾಗ ಯೆಹೋವನು ಅವನನ್ನು ಉದ್ಧರಿಸುವನು (ಕೀರ್ತ. 41:3).

ಇದ್ದ ಫರಿಸಾಯರು ಕೇಳಿ ನಾವೂ ಕುರುಡರೇನು? ಎಂದು ಕೇಳಿದಾಗ ಯೇಸು ಅವರಿಗೆ ನೀವು ಕುರುಡರಾಗಿದ್ದರೆ ನಿಮಗೆ ಪಾಪವು ಇರುತ್ತಿರಲಿಲ್ಲ. ನಮಗೆ ಕಣ್ಣು ಕಾಣುತ್ತವೆ ಅನ್ನುತ್ತೀರಾದ್ದರಿಂದ ನಿಮ್ಮ ಪಾಪವು ಉಳಿದಿದೆ" (ಯೋಹಾ. 9:39–41). "ತಾವೇ ಕುರುಡರು, ಮತ್ತೊಬ್ಬರಿಗೆ ದಾರಿ ತೋರಿಸುವದಕ್ಕೆ ಹೋಗುತ್ತಾರೆ; ಕುರುಡನು ಕುರುಡನಿಗೆ ದಾರಿ ತೋರಿಸಿದರೆ ಅವರಿಬ್ಬರೂ ಕುಣಿಯಲ್ಲಿ ಬೀಳುವರು ಅಂದನು" (ಮತ್ತಾ. 15:14).

"ನಾವು ಸಾರುವ ಸುವಾರ್ತೆಯು ಕೆಲವರಿಗೆ ಮರೆಯಾಗಿರುವುದಾದರೆ ನಾಶನ ಮಾರ್ಗದಲ್ಲಿರುವವರಿಗೇ ಮರೆಯಾಗಿರುವುದು. ಇವರಲ್ಲಿ ದೇವರ ಪ್ರತಿರೂಪವಾಗಿರುವ ಕ್ರಿಸ್ತನ ಪ್ರಭಾವವನ್ನು ತೋರಿಸುವ ಸುವಾರ್ತೆಯ ಪ್ರಕಾಶವು ಉದಯವಾಗಬಾರದೆಂದು ಈ ಪ್ರಪಂಚದ ದೇವರು ನಂಬಿಕೆಯಿಲ್ಲದವರ ಮನಸ್ಸನ್ನು ಮಂಕು ಮಾಡಿದನು" (2 ಕೊರಿ. 4:3–4). "ಕಿವಿಯುಳ್ಳವನು ಕೇಳಲಿ ಅಂದನು" (ಮತ್ತಾ. 13:9).

2) **ಜನರನ್ನು ತಪ್ಪಾದ (ದೇವರ ವಾಕ್ಯ ಒಪ್ಪದ ವಿಷಯಗಳಿಗೆ) ಸಂಪ್ರದಾಯಗಳಲ್ಲಿ ಕಟ್ಟಿ ಹಾಕುವುದು, ದೇವರ ವಾಕ್ಯದಲ್ಲಿ ಇರದೆ ಇರುವವುಗಳನ್ನು ಉಪದೇಶಿಸುವಂತದ್ದು :–** ದೇವಜನರಿಗೆ ಆತ್ಮೀಕವಾಗಿ ಬೆಳೆಯಲು, ಆತ್ಮೀಕ ಬಲ ಹೊಂದಲು, ಆತ್ಮೀಕ ಜ್ಞಾನ ಹೊಂದಲು ಬೇಕಾದದ್ದು ಧಾರ್ಮಿಕ ನಿಯಮಗಳಲ್ಲ, ಧಾರ್ಮಿಕ ಕಟ್ಟುಪಾಡುಗಳಲ್ಲವೆಂದು ನಾವು ತಿಳಿಯಬೇಕು. "ನೇಮ ನಿಷ್ಠೆಗಳನ್ನು ಆಧಾರ ಮಾಡಿಕೊಳ್ಳುವವರೆಲ್ಲರೂ ಶಾಪಾಧೀನರಾಗಿದ್ದಾರೆ. ಹೇಗಂದರೆ, ಧರ್ಮಗ್ರಂಥದೊಳಗೆ ಬರೆದಿರುವವುಗಳನ್ನೆಲ್ಲಾ ನಿತ್ಯವೂ ಕೈಗೊಳ್ಳದಿರುವ ಪ್ರತಿಯೊಬ್ಬನು ಶಾಪಗ್ರಸ್ತನೆಂದು ಶಾಸ್ತ್ರದಲ್ಲಿ ಬರೆದಿದೆ" (ಗಲಾ. 3:10). "ಯೇಸು ಕ್ರಿಸ್ತನ ಮೇಲಣ ನಂಬಿಕೆಯಿಂದಲೇ ಹೊರತು ನೇಮನಿಷ್ಠೆಗಳನ್ನನುಸರಿಸಿ ನೀತಿವಂತನೆಂದು ನಿರ್ಣಯಿಸಲ್ಪಡುವುದಿಲ್ಲವೆಂಬುದು ನಮಗೆ ತಿಳಿದಿರುವುದರಿಂದ ನಾವು ಸಹ ನೇಮ ನಿಷ್ಠೆಗಳನ್ನು ಬಿಟ್ಟು ಕ್ರಿಸ್ತನ ಮೇಲಣ ನಂಬಿಕೆಯಿಂದಲೇ ನೀತಿವಂತರೆಂದು ನಿರ್ಣಯಿಸಲ್ಪಡುವುದಕ್ಕಾಗಿ ಕ್ರಿಸ್ತ ಯೇಸುವಿನಲ್ಲಿ ನಂಬಿಕೆಯಿಟ್ಟೆವು; ಯಾಕಂದರೆ ಯಾವನಾದರೂ ನೇಮ ನಿಷ್ಠೆಗಳನ್ನನುಸರಿಸಿ ನೀತಿವಂತನೆಂದು ನಿರ್ಣಯಿಸಲ್ಪಡುವುದಿಲ್ಲ" (ಗಲಾ. 2:16) ತಮ್ಮ ಪಾಪಗಳಿಗೆ ಪಶ್ಚಾತ್ತಾಪಪಟ್ಟು ಕರ್ತನಾದ ಯೇಸುಕ್ರಿಸ್ತನು ತನ್ನ ಪಾಪಕ್ಕಾಗಿ ಶಿಲುಬೆಯಲ್ಲಿ ಸತ್ತು ಹೂಣಲ್ಪಟ್ಟು 3ನೆಯ ದಿನದಲ್ಲಿ ಮರಣದಿಂದ ಎದ್ದು ಬಂದನೆಂಬ ಸತ್ಯವನ್ನು ನಂಬಿ ಯೇಸುವನ್ನು ರಕ್ಷಕನು ಒಡೆಯನೆಂದು ಯಾರು ಅಂಗೀಕಾರ ಮಾಡುತ್ತಾರೋ ಅವರು ದೇವರ ದೃಷ್ಟಿಯಲ್ಲಿ ನೀತಿವಂತರಾಗುತ್ತಾರೆ. ಯಾವುದೇ ಆಚರಣೆ, ಯಾವುದೇ ಸಂಪ್ರದಾಯ, ಮನುಷ್ಯರೊಂದಿಗೆ ಪಾಪದ ಅರಿಕೆ ಮಾಡುವುದು ಇವು ಯಾವ ಸಂಗತಿಗಳು ಮನುಷ್ಯನನ್ನು ನೀತಿವಂತನಾಗಿ ನಿರ್ಣಯಿಸಲು ಸಾಧ್ಯವಿಲ್ಲ. ದೇವರ ವಾಕ್ಯ ಒಪ್ಪದ ಅನೇಕ ಸಂಗತಿಗಳನ್ನು ಜನರಿಗೆ ಇಂದು ಬೋಧಿಸುವುದನ್ನು ನಾವು ಕಾಣಬಹುದು. ಶಿಶು ದೀಕ್ಷಾಸ್ನಾನ, ದೃಢೀಕರಣ, ಪಾದ್ರಿಗಳ ಜೊತೆ ಪಾಪದ ಅರಿಕೆ, ಸತ್ತವರಿಗಾಗಿ ಪ್ರಾರ್ಥಿಸುವದು, ಸತ್ತವರ ಜೊತೆ ಮಧ್ಯಸ್ಥ ಪ್ರಾರ್ಥನೆ ಮಾಡುವುದು, ಸತ್ತವರ ಹಬ್ಬ ಆಚರಿಸುವುದು, ವಿಗ್ರಹರಾಧನೆ, ಮನುಷ್ಯನ ಆರಾಧನೆ ಇತ್ಯಾದಿ. ನಾವು ಯಾವುದೇ ಸಭೆಯಲ್ಲಿ (ಚರ್ಚಿನಲ್ಲಿ) ಇದ್ದರೂ ಅಲ್ಲಿ ಉಪದೇಶಿಸಲ್ಪಡುವ ವಾಕ್ಯ ಸತ್ಯವೇದದಿಂದ ತೆಗೆದದ್ದು ಅಥವಾ ಅವರ ಸ್ವಂತದಿಂದ ಬಂದದ್ದು ಎಂದು ಪರೀಕ್ಷಿಸಬೇಕು. ಇಲ್ಲದಿದ್ದಲ್ಲಿ ನಾವು ಆತ್ಮೀಕವಾಗಿ ಮೋಸಹೋಗುವಂಥ ಪರಿಸ್ಥಿತಿ ಬರಬಹುದು. ಆದಿ ಶಿಷ್ಯರು ಇದೇ ರೀತಿ ಮಾಡುತ್ತಿದ್ದರು. ಅಪೋಸ್ತಲರ ಮೂಲಕ ಎಷ್ಟೋ ದೊಡ್ಡ ಅದ್ಭುತಗಳು ನಡೆದರೂ ಅವರ ಉಪದೇಶವನ್ನು ಮಾತ್ರ ಜನರು ಸತ್ಯವೇದದಿಂದ ಪರೀಕ್ಷಿಸಿ ಅವರು ಉಪದೇಶ ಮಾಡುವುದು ಸತ್ಯವೇದದಲ್ಲಿ ಇರುವುದಾದರೆ ಮಾತ್ರ ಅದನ್ನು ಅಂಗೀಕರಿಸುತ್ತಿದ್ದರು. "ಆ ಸಭೆಯವರು ಥೆಸಲೋನಿಕದವರಿಗಿಂತ ಸದ್ಗುಣವುಳ್ಳವರಾಗಿದ್ದು ದೇವರ ವಾಕ್ಯವನ್ನು ಶುದ್ಧ ಮನಸ್ಸಿನಿಂದ ಅಂಗೀಕರಿಸಿ ಇವರು ಹೇಳುವ ಮಾತು ಹೌದೋ ಏನೋ ಎಂಬ ವಿಷಯದಲ್ಲಿ ಪ್ರತಿದಿನವೂ ಶಾಸ್ತ್ರಗ್ರಂಥಗಳನ್ನು ಶೋಧಿಸುತ್ತಿದ್ದರು" (ಅ.ಕೃ. 17:11). ಆದಕಾರಣ ಪರಲೋಕದ ಆಶೀರ್ವಾದಗಳಿಗೆ ನಾವು ಬಾಧ್ಯರಾಗಬೇಕಾದರೆ ದೇವರ ವಾಕ್ಯದ ಕಡೆಗೆ ನಾವು ಗಮನಹರಿಸುವುದು ಅನಿವಾರ್ಯವಾಗಿದೆ. ಕೀರ್ತ. 119:105 ರಲ್ಲಿ ನಿನ್ನ ವಾಕ್ಯವು ನನ್ನ ಕಾಲಿಗೆ ದೀಪವೂ ನನ್ನ ದಾರಿಗೆ ಬೆಳಕೂ ಆಗಿದೆ.

ಮುಂದುವರಿಯುವದು.........

**– ಪಾ॥ ಸುನಿಲ್ ಜಾನ್ ಡಿ'ಸೋಜಾ.**

ನಮ್ಮ ಹಿತಕ್ಕಾಗಿ ನೀನು ಮಾಡಿದ ಆಲೋಚನೆಗಳೂ
ಅದ್ಭುತಕಾರ್ಯಗಳೂ ಎಷ್ಟೋ ವಿಶೇಷವಾಗಿವೆ (ಕೀರ್ತ. 40:5).

# ಸ್ಥಳೀಯ ಮತ್ತು ವಿದೇಶ ಸುದ್ದಿ

- ವಿಶ್ವಸಂಸ್ಥೆ: ಪಾಕ್ ತಾಲಿಬಾನ್ ಮುಖ್ಯಸ್ಥ ಮುಲ್ಲಾ ಫಜ್‌ಲುಲ್ಲಾ ಆಲಿಯಾಸ್ ರೇಡಿಯೋ ಮುಲ್ಲಾ ವಿರುದ್ಧ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯು ನಿಷೇಧ ಹೇರಿದೆ. ಪಾಕಿಸ್ತಾನದ ಪೇಶಾವರ ಶಾಲೆಯ ಮೇಲೆ ನಡೆದ ಉಗ್ರದಾಳಿಯ ಮಾಸ್ಟರ್ ಮೈಂಡ್ ಎನಿಸಿಕೊಂಡಿರುವ ಮುಲ್ಲಾ ಫಜ್‌ಲುಲ್ಲಾ ಅನೇಕ ಭಯೋತ್ಪಾದಕ ಚಟುವಟಿಕೆಗಳನ್ನು ನಡೆಸಿರುವ ಹಾಗೂ ಅಂತಹ ದಾಳಿಗಳಿಗೆ ಹಣಕಾಸು ನೆರವನ್ನು ಒದಗಿಸಿರುವ ಕಾರಣಕ್ಕಾಗಿ ಭದ್ರತಾ ಮಂಡಳಿಯು ಆತನ ಮೇಲೆ ನಿಷೇಧ ಹೇರಿದೆ.

- ಮಧುಮೇಹ, ಕ್ಯಾನ್ಸರ್ ಮತ್ತಿತರ ರೋಗಗಳಿಗೆ ನಿರಂತರ ಔಷಧ ತೆಗೆದುಕೊಳ್ಳುತ್ತಿರುವವರಿಗೊಂದು ಕಹಿ ಸುದ್ದಿ. ಡಯಾಬಿಟಿಸ್, ಹೆಪಟೈಟಿಸ್ ಮತ್ತು ಕ್ಯಾನ್ಸರ್ ಔಷಧಗಳ ಸಹಿತ ಒಟ್ಟು 509 ಅಗತ್ಯ ಔಷಧಗಳ ಬೆಲೆಯಲ್ಲಿ ಶೇ. 3.84 ರಷ್ಟು ಹೆಚ್ಚಳ ಮಾಡಲು ಕೇಂದ್ರ ಸರಕಾರ ಔಷಧೀಯ ಕಂಪೆನಿಗಳಿಗೆ ಒಪ್ಪಿಗೆ ನೀಡಿದೆ.

- ಬೆಳೆಹಾನಿ ಪರಿಹಾರ ಶೇ. 50 ಹೆಚ್ಚಳ ಉತ್ತರ ಭಾರತದಲ್ಲಿ ಅಕಾಲಿಕ ಮಳೆ ಹಿನ್ನಲೆ ಹಾನಿ ನಿಯಮ ಸಡಿಲಿಕೆಗೂ ಪಿಎಂ ಆದೇಶ ದೇಶದಲ್ಲಿ ಅತಿವೃಷ್ಟಿಯಿಂದಾಗಿ ರೈತರು ಭಾರೀ ನಷ್ಟ ಅನುಭವಿಸಿ ಪರದಾಡುತ್ತಿರುವ ಹಿನ್ನಲೆಯಲ್ಲಿ ಅವರ ನೆರವಿಗೆ ಧಾವಿಸಿರುವ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರಕಾರ, ರೈತರಿಗೆ ನೀಡಲಾಗುವ ಪರಿಹಾರ ನಿಯಮಾವಳಿಯಲ್ಲಿ ಭಾರೀ ಬದಲಾವಣೆ ಮಾಡುವ ಮಹತ್ವದ ನಿರ್ಣಯ ತೆಗೆದುಕೊಂಡಿದೆ.

- ರಾಜ್ಯದಲ್ಲಿ 1 ರಿಂದ 7ನೇ ತರಗತಿವರೆಗೆ ನೂತನವಾಗಿ ಆರಂಭಿಸುವ ಇಂಗ್ಲೀಷ್ ಮಾಧ್ಯಮ ಶಾಲೆಗಳಿಗೆ ಹೊಸದಾಗಿ ಮಾನದಂಡ ನಿಗದಿಪಡಿಸಿ ಅಧಿಸೂಚನೆ ಹೊರಡಿಸುವ ಅಧಿಕಾರ ರಾಜ್ಯ ಸರಕಾರಕ್ಕಿದ್ದು, ಮುಂದೆ ಈ ನಿಟ್ಟಿನಲ್ಲಿ ಸೂಕ್ತ ತೀರ್ಮಾನ ಕೈಗೊಳ್ಳಬಹುದು ಎಂದು ಹೈಕೋರ್ಟ್ ಸ್ಪಷ್ಟಪಡಿಸಿದೆ.

- ಆಧಾರ್‌ಕಾರ್ಡ್ ಪಡೆಯಲು ಅನುಕೂಲವಾಗಲೆಂದು ರಾಜ್ಯದ ಎಲ್ಲ ಗ್ರಾ.ಪಂ. ಕಚೇರಿಗಳಲ್ಲಿಯೇ ಶಾಶ್ವತ ಆಧಾರ್ ನೋಂದಣಿ ಕೇಂದ್ರಗಳನ್ನು ಆರಂಭಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

- ಪ್ರತಿಷ್ಠಿತ ಪದ್ಮ ಪ್ರಶಸ್ತಿಗಳನ್ನು 6 ಕನ್ನಡಿಗರು ಸೇರಿದಂತೆ 48 ಗಣ್ಯರಿಗೆ ಪ್ರದಾನ ಮಾಡಲಾಯಿತು.ಸಂಗ್ರಹ.

# ವಿಶ್ವಾಸದಮನೆಗೆ ಬೇಟಿ ನೀಡಿದವರ ಅನಿಸಿಕೆಗಳು :

ವಿಶ್ವಾಸದಮನೆಗೆ ಬಂದ ನಂತರ ನನ್ನ ಮನದಾಳದಲ್ಲಿ ತುಂಬ ಸಂತೋಷವಾಯಿತು. ಏಕೆಂದರೆ ನಿರ್ಗತಿಕರ ಅನಾಥರ ಬಾಳಿಗೆ ಬೆಳಕಾಗಿ ದ್ವೀಪದಂತೆ ದಾರಿ ಉರಿಸುವ ಈ ಒಂದು ಸಂಸ್ಥೆಯು ನಿಜಕ್ಕೂ ಸ್ಫೂರ್ತಿದಾಯಕವಾಗಿದೆ. ಎಲ್ಲಾ ರೀತಿಯ ಜನರು ಇರುತ್ತಾರೆ. ಆದರೆ ಅಂತಹ ಅಸಹ್ಯ ರೀತಿಯಲ್ಲಿರುವ ಜನರನ್ನು ಸ್ವೀಕರಿಸಿ ಅಂತಹ ಜನರನ್ನು ಸತ್ಕರಿಸುವ ಮನೋಭಾವ ತಾಳ್ಮೆಯು ಸಹ ತುಂಬು ಪ್ರಾಮುಖ್ಯತೆ ಇದೆ. ಅದಕ್ಕಾಗಿ ಇನ್ನು ನನ್ನ ಅನಿಸಿಕೆ ಹೇಳಲಾಗದಷ್ಟು ಅಭಿಪ್ರಾಯಗಳು ಮನದಾಳದಲ್ಲಿ ಬರುತ್ತಿದೆ ಆದರೆ ಅದನ್ನು ಒಂದು ಸಣ್ಣ ಹಾಳೆಯ ಮೇಲೆ ಸ್ವಲ್ಪ ಮಟ್ಟಿಗೆ ವ್ಯಕ್ತಪಡಿಸುತ್ತಿದ್ದೇನೆ. ಧನ್ಯವಾದಗಳು.

**ಮಲ್ಲಿಕಾರ್ಜುನ ಎಸ್.**, ಮಿಲಾಗ್ರಿಸ್ ಕಾಲೇಜ್, ಕಲ್ಯಾಣಪುರ.

ಶಂಕರಪುರದ ವಿಶ್ವಾಸದಮನೆಯ ಭೇಟಿಯಲ್ಲಿ ನಾವು ನೋಡಿದ ಅಂಶ ಏನೆಂದರೆ ಶಿಸ್ತು, ಶುಚಿತ್ವಕ್ಕೆ ಪ್ರಾಮುಖ್ಯತೆಯನ್ನು ನೀಡಿದ್ದು, ಬಹಳ ಖುಷಿಯಾಯಿತು. ಮಾನಸಿಕ ಅಸ್ವಸ್ಥರಿಗೆ, ಅನಾಥರಿಗೆ, ಆಶ್ರಯವನ್ನು ನೀಡಿ ಸೇವೆಯನ್ನು ಮಾಡುತ್ತಿರುವ ವಿಶ್ವಾಸದ ಮನೆಗೆ ನೀಡಿದ ಭೇಟಿ ನಾವು ಯಾವತ್ತು ಮರೆಯಲಾರೆವು. ಇಂತಹ ಸಮಾಜ ಸೇವೆ ನಿರಂತರವಾಗಿ ನಡೆಯುವಂತಾಗಲಿ. ಸೇವೆಯನ್ನು ಮಾಡುವವರೊಂದಿಗೆ ಸಹಕರಿಸುವವರಿಗೆಲ್ಲಾ ದೇವರು ಒಳ್ಳೆಯದು ಮಾಡಲಿ. ಸೇವೆಯ ಉದ್ದೇಶ ಖಂಡಿತವಾಗಿಯೂ ದೇವರನ್ನು ತಲುಪುತ್ತದೆ ಎಂಬುದರಲ್ಲಿ ಯಾವ ಸಂಶಯವೂ ಇಲ್ಲ. ಎಲ್ಲರಿಗೂ ದೇವರು ಒಳ್ಳೆಯದು ಮಾಡಲಿ ಎಂದು ಹಾರೈಸುವ

**ಸುಧಾ ಆರ್.**

ನನ್ನ ದೇವರೇ, ನಿನ್ನ ಚಿತ್ತವನ್ನು ಅನುಸರಿಸುವದೇ ನನ್ನ ಸಂತೋಷವು
(ಕೀರ್ತ. 40:8).

# ಅವಿಧೇಯತೆ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

**"ಮೊದಲು ಶುಭವರ್ತಮಾನವನ್ನು ಕೇಳಿದವರು ಅವಿಧೇಯರಾದ ಕಾರಣ ಅದರಲ್ಲಿ ಸೇರದೆ ಹೋದದ್ದರಿಂದಲೂ ಬಹುಕಾಲ ಹೋದನಂತರ ಆತನು ದಾವೀದನ ಬಾಯಿಂದ ಮಾತಾಡಿ ಈ ಹೊತ್ತೇ ಎಂದು ಒಂದಾನೊಂದು ದಿವಸವನ್ನು ಗೊತ್ತು ಮಾಡುತ್ತಾನೆ"** (ಇಬ್ರಿ. 4:6–7).

'ಅವಿಧೇಯತೆ' ಎಂಬ ಪದವು ನಮ್ಮನ್ನು ದೇವರಿಂದ ಬರುವ ಸಕಲ ಮೇಲುಗಳನ್ನು ತಡೆಯಬಹುದಾದ ಪದವಾಗಿರುತ್ತದೆ. ದೇವರು ನಮ್ಮಲ್ಲಿ ಮಾಡಬೇಕೆಂದಿರುವ ಎಲ್ಲಾ ಕಾರ್ಯಗಳಿಗೆ ಈ ಅವಿಧೇಯತೆ ಅಡ್ಡಿಯಾಗಿರುತ್ತದೆ. ಅವಿಧೇಯತೆ ನಿಮಿತ್ತವಾಗಿ ಇಸ್ರಾಯೇಲ್ಯರು ದೇವರ ವಿಶ್ರಾಂತಿಯಲ್ಲಿ ಸೇರದೆ ಹೋದರು. ಅವಿಧೇಯತೆ ನಿಮಿತ್ತವಾಗಿ ಇಸ್ರಾಯೇಲ್ಯರ ಮೊದಲನೆ ಅರಸನಾದ ಸೌಲನು ಅರಸುತನದಿಂದ ತಳ್ಳಲ್ಪಟ್ಟನು. ಧರ್ಮೋಪದೇಶಕಾಂಡ 28 ಅಧ್ಯಯದ ಶಿರೋನಾಮೆ (ತಲೆ ಬರಹ)ಯನ್ನು ನಾವು ಓದುವುದಾದರೆ ಅಲ್ಲಿ 'ವಿಧೇಯತ್ವ ದಿಂದುಂಟಾಗುವ ಮೇಲು, ಅವಿಧೇಯತ್ವ ದಿಂದುಟಾಗುವ ಕೇಡು ಇವುಗಳ ವಿಷಯದಲ್ಲಿ ಬರೆಯಲ್ಪಟ್ಟಿರುತ್ತದೆ. ಯೇಸುಕ್ರಿಸ್ತನು ಈ ಲೋಕದಲ್ಲಿರುವಾಗ ದೇವರ ಮಗನಾಗಿದ್ದರೂ ಅನುಭವಿಸಿದ ಬಾಧೆಗಳಿಂದಲೇ ವಿಧೇಯತೆಯನ್ನು ಕಲಿತುಕೊಂಡನು. (ಇಬ್ರಿ. 5:8). ಅವಿಧೇಯತೆ ಎಂದರೆ ಮಾತು ಕೇಳದೆ ಹೋಗುವುದು ಎಂದರ್ಥ. ನಾವು ದೇವರಿಗೆ ಅವಿಧೇಯರಾಗಿ ನಡಕೊಂಡಾಗ ಬರಬೇಕಾದದ್ದನ್ನು ಹೊಂದದೆ ಹೋಗುತ್ತೇವೆ.

**ವಯಸ್ಕರ ಸ್ವರ**

1) **ಅವಿಧೇಯನಾದವನ ಪ್ರಾರ್ಥನೆ ಕೇಳಲ್ಪಡುವುದಿಲ್ಲ :–** (ಜ್ಞಾನೋ. 28:9). ಧರ್ಮೋಪದೇಶಕ್ಕೆ ಕಿವಿಗೊಡದವನು ಮಾಡುವ ದೇವ ಪ್ರಾರ್ಥನೆಯೂ ಅಸಹ್ಯ. ನಾವು ಅವಿಧೇಯತೆಯಿಂದ ಕೂಡಿದ ಎಷ್ಟೇ ದೊಡ್ಡ ಪ್ರಾರ್ಥನೆಯಾದರೂ, ದೇವರು ಅದಕ್ಕೆ ಕಿವಿಗೊಡುವುದಿಲ್ಲ. ಶಾಸ್ತ್ರಿಗಳೂ, ಫರಿಸಾಯರೂ, ದೊಡ್ಡ ದೊಡ್ಡ ಬೋಧನೆಗಳನ್ನು ಮಾಡುತ್ತಿದ್ದರು ಆದರೆ ಅವರು ಅದರಂತೆ ನಡೆಯುತ್ತಿರಲಿಲ್ಲ ಅದನ್ನು ಕಂಡು ಯೇಸು ಹೇಳಿದರು, "ಅವರ ನಡತೆಯ ಪ್ರಕಾರ ನಡೆಯಬೇಡಿರಿ. ಅವರು ಹೇಳುತ್ತಾರೇ ಹೊರತು ನಡೆಯುವುದಿಲ್ಲ" (ಮತ್ತಾ. 23:2). ಕೆಲವರು ಸಕತ್ತಾಗಿ ಆರಾಧನೆ ಮಾಡುತ್ತಾರೆ, ಸಭೆಯಲ್ಲಿ ದೊಡ್ಡ ಸಾಕ್ಷಿ ಬಿಗಿಯುತ್ತಾರೆ, ಎಲ್ಲರಲ್ಲಿಯೂ ಎದ್ದು ಕಾಣುತ್ತಾರೆ ಆದರೆ ನಡತೆ ಮಾತ್ರ ಅವಿಧೇಯತೆಯಿಂದ ಕೂಡಿರುವುದರಿಂದ ದೇವರಿಗೆ ಮಹಿಮೆ ಪಡಿಸಲಾಗದು. ಸೌಲನು ಮೇಲ್ತರದ ಕುರಿಗಳನ್ನು ದೇವರಿಗೆಂದು ಯಜ್ಞಮಾಡಲೆಂದು ಉಳಿಸಿ ತರಲು ದೇವರು ಅದನ್ನು ಮೆಚ್ಚಲಿಲ್ಲ, ಕಾರಣ ಅವಿಧೇಯತೆ (1 ಸಮು. 15:21). ಇಂದು ಅನೇಕರು ಬಡ್ಡಿಗೆ ಹಣ ಕೊಡುವುದು ತಪ್ಪು ಎಂದು ದೇವರ ವಾಕ್ಯ ಹೇಳಿದರೂ (ಕೀರ್ತ. 15:5 ಸಾಲಕ್ಕೆ ಬಡ್ಡಿ ಕೇಳದವನೂ ಆಗಿರಬೇಕು). ಬಡ್ಡಿಗಾಗಿ ಅನೇಕರಿಗೆ ಸಾಲಕೊಟ್ಟು ಬಡ್ಡಿಯನ್ನು ಪಡೆದುಕೊಂಡು ಅದರಲ್ಲಿ ದಶಮಾಂಶ, ಕಾಣಿಕೆಯನ್ನು ಹಾಕುವವರಿದ್ದಾರೆ, ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ದೇವರನ್ನು, ಸರಕಾರವನ್ನು ವಂಚಿಸಿ ಸರಕಾರದಿಂದ ಹಣ ಬರಿಸಿ ಅದರಲ್ಲಿ ದೇವರಿಗೆ ಕಾಣಿಕೆ ಎಂದು ಕೊಡುವವರಿದ್ದಾರೆ ದೇವರು ಮೆಚ್ಚುವನ್ನೋ ? ನಾವು ಹಾಕುವ ಕಾಣಿಕೆಯ ಹಣವು ಕೂಡಾ ಪ್ರಾಮಾಣಿಕದಿಂದ ಕೂಡಿರಬೇಕು. ನಾವು ಮಾಡುವ ಆರಾಧನೆ, ಪ್ರಾರ್ಥನೆಗಳು, ಉಪವಾಸಗಳು, ಸೇವೆ, ದಶಮಾಂಶ, ಕಾಣಿಕೆ ಎಲ್ಲವೂ ವಿಧೇಯತೆಯಿಂದ ಅರ್ಪಿಸುವುದಾದರೆ ನಮಗೆ ಬಹಳಷ್ಟು ಪ್ರತಿಫಲವಿದೆ. 'ವಾಕ್ಯದ ಪ್ರಕಾರ ನಡೆಯುವವರಾಗಿರಿ, ಮೋಸಗೊಳಿಸಬೇಡಿರಿ' (ಯಾಕೋ. 1:22). ನಾವು ದೇವರಿಗೆ ವಿಧೇಯರಾಗದ ಸ್ಥಳದಲ್ಲಿ ಸೈತಾನನಿಗೆ ಅವಕಾಶವನ್ನು ಬಿಟ್ಟು ಕೊಡುವವರಾಗಿರುತ್ತೇವೆ.

2) **ಅವಿಧೇಯತೆಯು ಮಾಟ ಮಂತ್ರಕ್ಕೆ ಸಮಾನವಾಗಿರುತ್ತದೆ :–** (1 ಸಮು. 15:23):– ದೇವಮಕ್ಕಳು ಶಕುನ ಮಂತ್ರ ನೋಡಬಾರದು, ಮಾಡಬಾರದು ಎಂದು ಸತ್ಯವೇದ ಹೇಳುತ್ತದೆ (ಧರ್ಮೋ. 18:10–11–14). ಕೆಲವರು ಸಭೆಯಲ್ಲಿ ದೇವರೇ ಮಾಟಮಂತ್ರ ವಾದಿಗಳು ರಕ್ಷಣೆ ಹೊಂದಲಿ, ಸಭೆಗೆ ಬರಲಿ ಎಂದು ದೊಡ್ಡದಾಗಿ ಪ್ರಾರ್ಥಿಸುತ್ತಾರೆ. ಆದರೆ ಅವರು ಸಭೆಗೆ, ದೇವರಿಗೆ, ಸೇವಕರಿಗೆ ಅವಿಧೇಯರಾಗಿ ಅವರೇ ಸಭೆಗೆ ದೊಡ್ಡ ಮಂತ್ರವಾದಿಗಳಾಗಿ ಇರುತ್ತಾರೆ. ಸೌಲನು ಇಸ್ರಾಯೇಲ್ಯರ ಅರಸನಾದ ವೇಳೆಯಲ್ಲಿ ದೇಶದಲ್ಲಿರುವ ಮಾಟಗಾತಿ, ಮಂತ್ರ ವಾದಿಗಳನ್ನು ದೇಶದಿಂದ ಹೊರಡಿಸಿ ಬಿಟ್ಟಿದ್ದನು (1 ಸಮು. 28:3). ಅದೇ ಸೌಲನು ದೇವರಿಗೆ ಅವಿಧೇಯನಾದಾಗ ದೇವರಿಂದ ಅವರಿಗೆ ಉತ್ತರ ಸಿಗಲಿಲ್ಲವೆಂದು ತಾನೇ ಮಾಟಗಾತಿಯನ್ನು ಹುಡುಕಿ ಹೋಗುತ್ತಾನೆ (1 ಸಮು.28:4–6). ಅವಿಧೇಯರಾದವರು ತಮ್ಮ ನಂಬಿಕೆಯನ್ನು ಸಹ ಕಳೆದುಕೊಂಡು ಇಂತಹ ಸ್ಥಿತಿಗೆ ಹೋಗುವರು. ಅನೇಕರು ದೇವರ ಮೇಲಿಟ್ಟಿರುವ ನಂಬಿಕೆಯ ಕೊರತೆ ಬಂದಾಗ ದೇವರಿಗೆ ಅವಿಧೇಯರಾಗುವರು ಆದರೆ ಅಬ್ರಹಾಮನು ನಂಬಿಕೆಯಿಂದಲೇ ದೇವರಿಗೆ ವಿಧೇಯನಾದನು (ಇಬ್ರಿ. 11:8). ನಂಬಿಕೆಯಿಂದಲೇ ಮಗನನ್ನು ಸಮರ್ಪಿಸಲು ಮುಂದಾದನು (ಇಬ್ರಿ. 11:17–18). ಅಬ್ರಹಾಮನು ದೇವರಲ್ಲಿ ಇಟ್ಟಿದ ನಂಬಿಕೆಯ ನಿಮಿತ್ತವಾಗಿ ದೇವರ ಮಾತನ್ನು ತಳ್ಳಿಬಿಡದೆ ಮಗನನ್ನು ಅರ್ಪಿಸುವುದರ ಮೂಲಕ ದೇವರಿಗೆ ವಿಧೇಯನಾದನು. ದೇವರಿಗೆ ವಿಧೇಯನಾಗದೆ ಸೈತಾನನ್ನು ಬಿಡಿಸಲು, ಓಡಿಸಲು ಸಾಧ್ಯವಿರುವುದಿಲ್ಲ. ಒಂದು ಪ್ರಯತ್ನಿಸಿದರೆ ಮಹಾಯಾಜಕ ಸ್ಕೇವನ ಮಕ್ಕಳ ಸ್ಥಿತಿಯೇ ಆಗಬಹುದು (ಅ.ಕೃ. 19:13–16).

ಮುಂದುವರಿಯುವದು.......

**ಪಾ॥ ರೋನಾಲ್ಡ್ ಮಚಾದೋ**
ಬೇತೇಲ್ ಚರ್ಚ್ ಕಾಮಗೆರೆ.

ಯೆಹೋವನು ತನ್ನ ಸಂಕಲ್ಪವನ್ನು ಸಿದ್ಧಿಗೆ ತಂದು ತಾನು ಪುರಾತನಕಾಲದಲ್ಲಿ ನುಡಿದ ಮಾತನ್ನು ಈಡೇರಿಸಿದ್ದಾನೆ (ಪ್ರಲಾ. 2:17).

## OUR BANK ACCOUNT DETAILS :

**CANARA BANK, Shankarpura Branch. A/c Name : DGMBC Trust**
**A/c. No. 0636101011338 IFSC : CNRB 0000636 Swift : CNRBINBBRFM**

**CORPORATION BANK, Kurkal Branch A/c Name : DGMBC Trust**
**A/c. No. 018900101007084 IFSC : CORP 0000189 Swift : CORPINBB148**

**ICICI BANK, Udupi Branch A/c Name : DGMBC Trust A/c. No. 00720102575**
**Swift : ICICINBBXXX IFSC : ICIC0000072**

## ಓದುಗರಿಗೆ ವಿಶೇಷ ಸೂಚನೆ

1. ಪ್ರೀತಿಯ ಓದುಗರೆಲ್ಲರಿಗೂ ತಿಳಿಯ ಪಡಿಸುವುದೇನೆಂದರೆ ತಾವುಗಳು ಡಿ.ಡಿ./ಚೆಕ್ಕುಗಳು ಯಾವುದನ್ನು ನಮ್ಮ ಸೇವೆಗೆ ಕಳುಹಿಸಲು ಬಯಸುವುದಾಗಿದ್ದಲ್ಲಿ ದಯಮಾಡಿ ರಿಜಿಸ್ಟರ್ ಪೋಸ್ಟ್ ಮೂಲಕ ಕಳುಹಿಸಲು ವಿನಂತಿಸುತ್ತೇವೆ. ಇದಕ್ಕಿಂತ ಮುಂಚೆ ಕೆಲವು ಪತ್ರಗಳು ನಮಗೆ ಸಿಗದೆ ಇರುವ ಕಾರಣ ತಮಗೆಲ್ಲರಿಗೂ ಈ ಸಲಹೆಯನ್ನು ಕೊಡಲು ಬಯಸುತ್ತೇವೆ.
2. ತಮಗೆ ಪ್ರತಿ ತಿಂಗಳು ನಮ್ಮ 'ದೇವರ ಸ್ವರ' ಮಾಸಿಕ ಪತ್ರಿಕೆ ತಲುಪುತ್ತಾ ಇರಬಹುದು. ಆದರೆ ಅದಕ್ಕೆ ವಾರ್ಷಿಕ ದೇಣಿಗೆ ರೂ. 180/–ನ್ನು ಕೊಟ್ಟು ಚಂದಾದಾರರಾಗಿರದಿದ್ದಲ್ಲಿ ದಯಮಾಡಿ ತಮ್ಮ ಪರವಾದ ವಾರ್ಷಿಕ ರೂ. 180/–ನ್ನು ಮನಿಯಾರ್ಡರ್/ಡಿ.ಡಿ. ಮೂಲಕ ಕಳುಹಿಸಿ ನಿಮ್ಮ ಹೆಸರನ್ನು ನೋಂದಾಯಿಸಿಕೊಳ್ಳಿ ಹಾಗೂ ನಿಮ್ಮ ವಿಳಾಸವನ್ನು ಮನಿಯಾರ್ಡರ್ ಸಂದೇಶ ಭಾಗದಲ್ಲಿ ಪಿನ್‌ಕೋಡ್ ಸಮೇತ ದಯವಿಟ್ಟು ನಮಗೆ ಬರೆದು ಕಳುಹಿಸಿ.
3. ತಮಗೆ ಪ್ರತಿ ತಿಂಗಳು ಸಮಯಕ್ಕೆ ಸರಿಯಾಗಿ ನಮ್ಮ 'ದೇವರ ಸ್ವರ' ಮಾಸಿಕ ಪತ್ರಿಕೆ ಸಿಗದಿದ್ದಲ್ಲಿ ದಯಮಾಡಿ ನಮ್ಮ ಗಮನಕ್ಕೆ ತರಬೇಕಾಗಿ ಕೇಳಿಕೊಳ್ಳುತ್ತೇವೆ.
4. ಈ ಪತ್ರಿಕೆಗೆ ಯಾವುದೇ ಸಲಹೆ ಮತ್ತು ಸೂಚನೆಗಳನ್ನು ಕೊಡಬಯಸುವವರು ನಮ್ಮ ವಿಳಾಸಕ್ಕೆ ಬರೆದು ಕಳುಹಿಸಿ.
5. ನಿಮ್ಮ ವಿಳಾಸವು ಬದಲಾವಣೆ ಹೊಂದಿರುವುದಾದರೆ ನಿಮ್ಮ ಈಗಿನ ವಿಳಾಸವನ್ನು ಕಳುಹಿಸಿ ಕೊಡಿರಿ.
6. ನಿಮ್ಮ ವಿಳಾಸಕ್ಕೆ ಎರಡು ಪುಸ್ತಕಗಳು ಬರುತ್ತಿದ್ದರೆ ಅದನ್ನು ನಮ್ಮ ಗಮನಕ್ಕೆ ತರಬೇಕಾಗಿ ಕೇಳಿಕೊಳ್ಳುತ್ತೇವೆ.

ನಮ್ಮ ವಿಳಾಸ :
ಸಂಪಾದಕರು, 'ದೇವರ ಸ್ವರ',
ಬೇತೇಲ್ ಚರ್ಚ್, ಯೇಸುಪುರ, ಶಂಕರಪುರ ಅಂಚೆ, ಉಡುಪಿ – 574115, ಕರ್ನಾಟಕ, ಭಾರತ.
Email : editor_voiceofgod@hotmail.com
Website : www.divinegen.org www.dgmbethelchurch.org

ನಮ್ಮ ಕಛೇರಿ ವಿಳಾಸ :
ಡಿಜಿಎಂ ಬೇತೇಲ್ ಕಛೇರಿ,
ಬೇತೇಲ್ ಚರ್ಚ್, ಯೇಸುಪುರ, ಶಂಕರಪುರ ಅಂಚೆ, ಉಡುಪಿ – 574115, ಕರ್ನಾಟಕ, ಭಾರತ.
Ph: (0820) 2589070, 200 2781
E-mial: dgmofficial@gmail.com

ನಮ್ಮ ಹಿತಕ್ಕಾಗಿ ನೀನು ಮಾಡಿದ ಆಲೋಚನೆಗಳೂ
ಅದ್ಭುತಕಾರ್ಯಗಳೂ ಎಷ್ಟೋ ವಿಶೇಷವಾಗಿವೆ (ಕೀರ್ತ. 40:5).

# ಮಹಿಳೆಯರ ಸ್ವರ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

ಅನೇಕರು ಮದುವೆಯ ಕುರಿತು ದೇವರ ಉದ್ದೇಶವೇನೆಂದು ತಿಳಿಯದೆ ವಿವಾಹ ವಿಚ್ಛೇದನಾವನ್ನು ಮಾಡುತ್ತಿದ್ದಾರೆ, ಅನೇಕರು ಸಂತೋಷದಿಂದ ಬಂದು ತಮ್ಮ ಮದುವೆ ನಡೆಯಲಿಕ್ಕೆ ಇದೆ ಎಂದು ಹೇಳುತ್ತಾರೆ. ಅವರಿಗೆ ನೀನು ಯಾಕೆ ಮದುವೆಯಾಗುತ್ತಿದ್ದೀ ಎಂದು ಪ್ರಶ್ನೇ ಹಾಕಿದರೆ ಅವರಲ್ಲಿ ಉತ್ತರ ಇರುವುದಿಲ್ಲ, ಕೆಲವರು ಪ್ರಾಯಕ್ಕೆ ಬಂದಿರುವುದರಿಂದಾಗಿ ಮದುವೆಯಾಗುತ್ತೇನೆಂದು, ಇನ್ನು ಕೆಲವರು ತಂದೆ ತಾಯಿ ಮದುವೆ ಮಾಡುತ್ತಿದ್ದಾರೆಂದು, ಇನ್ನು ಕೆಲವರು ಮದುವೆಯಾಗುವುದು ಮಕ್ಕಳು ಮಾಡಲೆಂದು ಯಾವುದೋ ಒಂದು ಮನಸ್ಸಿಗೆ ಬಂದಂತಹ ಉತ್ತರವನ್ನು ಕೊಡುತ್ತಾರೆ ಆದರೆ ಮದುವೆಯ ಕುರಿತು ದೇವರಿಗೆ ಒಂದು ದೊಡ್ಡ ಯೋಜನೆ ಇದೆ ಎಂದು ಸತ್ಯವೇದವು ತಿಳಿಸುತ್ತದೆ.

**ಮದುವೆಯ ಕುರಿತು ದೇವರ ಯೋಜನೆ ಏನು?**

1) **ಸಂತಾನಭಿವೃದ್ಧಿ (ಆದಿ. 1:28)** :– ನೀವು ಬಹು ಸಂತಾನವುಳ್ಳವರಾಗಿ ಹೆಚ್ಚಿರಿ, ಭೂಮಿಯಲ್ಲಿ ತುಂಬಿಕೊಂಡು ಅದನ್ನು ವಶಮಾಡಿಕೊಳ್ಳಿರಿ ಸಮುದ್ರದ ಮೀನುಗಳ ಮೇಲೆಯೂ ಆಕಾಶದ ಪಕ್ಷಿಗಳ ಮೇಲೆಯೂ ಭೂಮಿಯಲ್ಲಿ ಚಲಿಸುವ ಎಲ್ಲಾ ಜೀವಿಗಳ ಮೇಲೆಯೂ ಧೊರೆತನ ಮಾಡಿರಿ ಅಂದನು. ಅನೇಕರು ಮದುವೆಯ ಆರಂಭದಲ್ಲಿ ತಮ್ಮ ಸೌಂದರ್ಯಕ್ಕೆ ತೊಂದರೆಯಾಗುತ್ತದೆಂದು ಗರ್ಭಪಾತ (ಅಬಾಷನ್) ಮಾಡಿಸಿಕೊಳ್ಳುತ್ತಾರೆ. ಗರ್ಭಪಾತ ಮಾಡಿಸುವುದು ದೇವರ ವಾಕ್ಯಕ್ಕೆ ವಿರುದ್ಧವಾದ ಸಂಗತಿಯಾಗಿದೆ. "ನಾನು ಗುಪ್ತಸ್ಥಳದಲ್ಲಿ ಏರ್ಪಡುತ್ತಾ ಭೂಗರ್ಭದಲ್ಲಿ ರಚಿಸಲ್ಪಡುತ್ತಾ ಇದ್ದಾಗ ನನ್ನ ಅಸ್ಥಿಪಂಜರವು ನಿನಗೆ ಮರೆಯಾಗಿದ್ದಿಲ್ಲ. ನಾನು ಇನ್ನೂ ಕೇವಲ ಪಿಂಡವಾಗಿರುವಾಗ ನಿನ್ನ ಕಣ್ಣುಗಳು ನನ್ನನ್ನು ನೋಡಿದವು; ನನ್ನ ಆಯುಷ್ಕಾಲದ ಪ್ರಥಮ ದಿನವು ಪ್ರಾರಂಭವಾಗುವ ಮೊದಲೇ ಅದರ ಎಲ್ಲಾ ದಿನಗಳು ನಿನ್ನ ಪುಸ್ತಕದಲ್ಲಿ ಬರೆಯಲ್ಪಟ್ಟವು" (ಕೀರ್ತ. 139:15–16). ಒಂದು ತಾಯಿಯ ಗರ್ಭದಲ್ಲಿ ಬೆಳೆಯುವಂತಹ ಮಗುವಿನ ಕುರಿತು ದೇವರ ಒಂದು ಯೋಜನೆ ಇರುತ್ತದೆ ಅದನ್ನು ನಾಶಮಾಡಲು ನಮಗೆ ಯಾವುದೇ ಅಧಿಕಾರವಿರುವುದಿಲ್ಲ. ಗರ್ಭದಲ್ಲಿರುವ ಮಗುವನ್ನು ಸಾಯಿಸುವುದು ಲೋಕದಲ್ಲಿ ಜೀವಿಸುವ ಮನುಷ್ಯನನ್ನು ಸಾಯಿಸುವುದು ಒಂದೇ. ದೇವರ ದೃಷ್ಟಿಯಲ್ಲಿ ಎರಡೂ ಕೂಡ ಕೊಲೆಯಾಗಿದೆ. ಗರ್ಭಪಾತ ಮಾಡುವುದು ಹಾಗೂ ಗರ್ಭಪಾತ ಮಾಡಿಸುವುದಕ್ಕೆ ಸಹಾಯ ಮಾಡುವುದು ಎರಡು ಪಾಪವಾಗಿದೆ. ದೇವರ ಸಮ್ಮುಖದಲ್ಲಿ ಪಶ್ಚಾತ್ತಾಪದಿಂದ ಕ್ಷಮೆ ಕೇಳಿಕೊಳ್ಳೋಣ.

2) **ಮನುಷ್ಯನ ಒಂಟಿತನ ನೀಗಲು** :– (ಆದಿ. 2:18) ಮತ್ತು ಯೆಹೋವ ದೇವರು ಮನುಷ್ಯನು ಒಂಟಿಗನಾಗಿರುವುದು ಒಳ್ಳೇದಲ್ಲ ಅವನಿಗೆ ಸರಿ ಬೀಳುವ ಸಹಕಾರಿಯನ್ನು ಉಂಟು ಮಾಡುವೆನು ಅಂದನು. ಮನುಷ್ಯನು ಒಂಟಿಗನಾಗಿರುವುದು ಒಳ್ಳೇದಲ್ಲ (ಕೀರ್ತ. 68:6). ಆದಿಕಾಂಡ 1 ಅಧ್ಯಾಯದಲ್ಲಿ ದೇವರ ಸೃಷ್ಟಿಕಾರ್ಯವನ್ನು ನೋಡುತ್ತೇವೆ. ಅಲ್ಲಿ ಕರ್ತನು ಎಲ್ಲಾ ಸೃಷ್ಟಿ ಕಾರ್ಯವನ್ನು ಮಾಡಿ ಮುಗಿಸುವಾಗ 7 ಕಡೆಗಳಲ್ಲಿ ಎಲ್ಲವೂ ದೇವರಿಗೆ ಒಳ್ಳೇಯದಾಗಿ ಕಂಡಿತು ಅಂಥ ನಾವು ನೋಡುತ್ತೇವೆ (ಆದಿ. 1:4,10,12,18,21,25,31). ಆದರೆ ಆದಿ. 2:18ರಲ್ಲಿ ಮನುಷ್ಯನು ಮಾತ್ರ ಒಂಟಿಗನಾಗಿರುವದು ದೇವರಿಗೆ ಒಳ್ಳೇದಾಗಿ ಕಾಣಲಿಲ್ಲವೆಂದು ಕೂಡ ನೋಡಬಹುದು. ಆದಿ. 1:27 ಹೀಗೆ ದೇವರು ಮನುಷ್ಯನನ್ನು ತನ್ನ ಸ್ವರೂಪದಲ್ಲಿ ಉಂಟು ಮಾಡಿದನು, ದೇವ ಸ್ವರೂಪದಲ್ಲಿ ಅವರನ್ನು ಉಂಟು ಮಾಡಿ ಅವರನ್ನು ಗಂಡು ಹೆಣ್ಣಾಗಿ ನಿರ್ಮಿಸಿದನು.

3) **ಸರಿಯಾದ ಸಹಕಾರಿಯನ್ನು ಕೊಡಲು** (ಆದಿ. 2:18) :– ಮತ್ತು ಯೆಹೋವ ದೇವರು ಮನುಷ್ಯನು ಒಂಟಿಗನಾಗಿರುವುದು ಒಳ್ಳೇದಲ್ಲ, ಅವನಿಗೆ ಸರಿಬೀಳುವ ಸಹಕಾರಿಯನ್ನು ಉಂಟು ಮಾಡುವೆನು ಅಂದನು. ನಮ್ಮ ಕಷ್ಟ ಸು:ಖ, ದು:ಖ, ನೋವು ಎಲ್ಲಾದರಲ್ಲಿಯೂ ಸರಿಯಾಗಿ ಸಹಕರಿಸುವ ಸಹಕಾರಿಯೇ ನಮ್ಮ ಹೆಂಡತಿ ಹಾಗೂ ಗಂಡ.

4) **ನೀತಿ ಬದ್ಧವಾದ ಕುಟುಂಬ ಜೀವಿತವನ್ನು ನಡೆಸಲು** (ಇಬ್ರಿ. 13:3):– ದಾಂಪತ್ಯವು ಎಲ್ಲಕ್ಕಿಂತಲೂ ಮಾನ್ಯವಾದದ್ದೆಂದು ಎಣಿಸಬೇಕು. ಒಂದು ಮದುವೆ ಅಂದರೆ ಒಬ್ಬ ವ್ಯಕ್ತಿ ಒಂದು ಸ್ತ್ರೀಯನ್ನು ಇಷ್ಟಪಟ್ಟು ಕರೆದುಕೊಂಡು ಹೋಗಿ ಬೇಕಾದ ರೀತಿಯಲ್ಲಿ ಜೀವಿಸುವುದಲ್ಲ, ಅದಕ್ಕೆ ಅದರದ್ದೇ ಅದಂತಹ ನಿಯಮಗಳಿವೆ. ಮೊದಲು ಹುಡುಗ ಹುಡುಗಿ ಪರಸ್ಪರ ನೋಡಿ ಒಪ್ಪಿಕೊಳ್ಳಬೇಕು ನಂತರ ಹಿರಿಯರ ಆಶೀರ್ವಾದದೊಂದಿಗೆ ದೇವರ ಹಾಗೂ ಸಭೆಯವರ

ಸಾಕ್ಷಿಯೊಂದಿಗೆ ಪರಸ್ಪರ ಒಡಂಬಡಿಕೆಯ ಮೂಲಕ ದಾಂಪತ್ಯ ಜೀವಿತಕ್ಕೆ ಪ್ರವೇಶಿಸುವುದಕ್ಕೆ ಮದುವೆ ಅನ್ನುತ್ತಾರೆ.

5) **ಕುಟುಂಬವಾಗಿ ದೇವರನ್ನು ಆರಾಧಿಸಲು** :– (ಯೆಹೋ. 24:15). ನಾನು ನನ್ನ ಮನೆಯವರು ಯೆಹೋವನನ್ನು ಸೇವಿಸುವೆವು. ನಾವು ಕುಟುಂಬವಾಗಿ ದೇವರನ್ನು ಆರಾಧಿಸುವುದು ದೇವರ ಚಿತ್ತವಾಗಿದೆ.

6) **ಪರಿಶುದ್ಧ ಜೀವಿತ ನಡೆಸುವುದಕ್ಕಾಗಿ** (ಇಬ್ರಿ. 13:3–4):– ಜಾರರಿಗೂ ವ್ಯಭಿಚಾರಿಗಳಿಗೂ ದೇವರು ಮುಯ್ಯಿ ತೀರಿಸುತ್ತಾನೆಂದು ಈ ವಾಕ್ಯ ಭಾಗದಲ್ಲಿ ನೋಡಬಹುದು. ಅನೇಕ ದೇಶಗಳಿಗೆ ಹೋಗಿ ಸೇವೆ ಮಾಡುವಂತಹ ಅವಕಾಶ ನನ್ನ ಪತಿಯವರಿಗೆ ಇರುವುದರಿಂದ ಅವರು ಅನೇಕ ಕುಟುಂಬಗಳನ್ನು ಗಮನಿಸಲು ಸಾಧ್ಯವಾಗುತ್ತದೆ. ಅನೇಕರು ಗಲ್ಫ್ ರಾಷ್ಟ್ರಗಳಲ್ಲಿ ಮದುವೆಯ ಹೊರಗೆ ಒಬ್ಬ ಪುರುಷ ಹಾಗೂ ಸ್ತ್ರೀ ಒಟ್ಟಾಗಿ ಜೀವನ ನಡೆಸುವುದನ್ನು ಹಾಗೂ ಹೆಂಡತಿ ಊರಿನಲ್ಲಿರುತ್ತಾಳೆ ಪುರುಷನು ಇಲ್ಲಿ ಪರಸ್ತ್ರೀಯ ಜೊತೆಯಲ್ಲಿ ಜೀವನ ಮಾಡುವಂಥದ್ದನ್ನು ಕಾಣಬಹುದು. ಇವೆಲ್ಲವೂ ದೇವರ ದೃಷ್ಟಿಯಲ್ಲಿ ಘೋರವಾದ ಅಪರಾಧವಾಗಿದೆ.

7) **ನೈತಿಕವಾಗಿ ಜೀವಿಸಲು** :–

1) ಹೆಣ್ಣನ್ನು ಮರುಳುಗೊಳಿಸಿ ಕೆಡಿಸಬಾರದು (ವಿಮೋ. 22:16–17).
2) ಪಶುಸಂಗ ಮಾಡಬಾರದು (ವಿಮೋ. 22:19).
3) ರಕ್ತ ಸಂಬಂಧವುಳ್ಳ ಸ್ತ್ರೀಯನ್ನು ಮದುವೆಯಾಗಬಾರದು (ಯಾಜ. 18:6).
4) ತಾಯಿಯನ್ನು ಸಂಗಮಿಸಬಾರದು (ಯಾಜ. 18:7).
5) ಮಲತಾಯಿಯ ಸಂಗಮಾಡಬಾರದು (ಯಾಜ. 18:8).
6) ತಂದೆಯ ಮಗಳನ್ನು ತಾಯಿಯ ಮಗಳನ್ನು ಇಟ್ಟುಕೊಳ್ಳಬಾರದು (ಯಾಜ. 18:9, 1 ಕೊರಿ. 5:1).
7) ಮಗನ ಮಗನನ್ನಾಗಲಿ ಮಗಳ ಮಗಳನ್ನಾಗಲಿ ಇಟ್ಟುಕೊಳ್ಳಬಾರದು (ಯಾಜ. 18:10).
8) ಮತ್ತೊಬ್ಬ ಹೆಂಡತಿಯಲ್ಲಿ ಹುಟ್ಟಿದವಳ ಸಂಗಮಾಡಬಾರದು (ಯಾಜ. 18:11).
9) ತಂದೆಯ ಒಡಹುಟ್ಟಿದವಳ ಸಂಗಮಾಡಬಾರದು (ಯಾಜ. 18:12).
10) ತಾಯಿಯ ಒಡಹುಟ್ಟಿದವಳ ಸಂಗಮಾಡಬಾರದು (ಯಾಜ. 18:13).
11) ತಂದೆಯ ಅಣ್ಣ ತಮ್ಮಂದಿರ ಹೆಂಡತಿಯರ ಸಂಗಮಾಡಬಾರದು (ಯಾಜ. 18:14).
12) ಸೊಸೆಯ ಸಹವಾಸ ಮಾಡಬಾರದು (ಯಾಜ. 18:15).
13) ಅತ್ತಿಗೆ ನಾದಿನಿಯರ ಸಂಗಮಾಡಬಾರದು (ಯಾಜ. 18:16).
14) ಮಗಳನ್ನಾಗಲಿ ಮೊಮ್ಮಗಳನ್ನಾಗಲಿ ಸಂಗಮಿಸಬಾರದು (ಯಾಜ. 18:17).
15) ಹೆಂಡತಿ ಜೀವದಿಂದಿರುವಾಗಲೇ ಒಡಹುಟ್ಟಿದವಳನ್ನು ಮದುವೆ ಮಾಡಿಕೊಳ್ಳಬಾರದು (ಯಾಜ. 18:18).
16) ಮುಟ್ಟಿನಿಂದ ಅಶುದ್ಧಳಾದ ಸ್ತ್ರೀಯನ್ನು ಸಂಗಮಿಸಬಾರದು (ಯಾಜ. 18:19).
17) ಪರ ಸ್ತ್ರೀಯ ಸಂಗ ಮಾಡಬಾರದು (ಯಾಜ. 18:20).
18) ಸ್ತ್ರೀಯನ್ನು ಸಂಗಮಿಸುವಂತೆ ಪುರುಷನನ್ನು ಸಂಗಮಿಸಬಾರದು (ಯಾಜ. 18:22).
19) ಯಾವ ಸ್ತ್ರೀಯು ಸಂಗಮಕ್ಕಾಗಿ ಪಶುವಿನ ಮುಂದೆ ನಿಲ್ಲಬಾರದು (ಯಾಜ. 18:23).

8) **ಕುಟುಂಬವಾಗಿ ಪತಿ ಪತ್ನಿ ಆನಂದಿಸಲು** :– (ಜ್ಞಾನೋ. 5:18) ನಿನ್ನ ಬುಗ್ಗೆಯು ದೇವರ ಆಶೀರ್ವಾದವನ್ನು ಹೊಂದಲಿ. ನಿನ್ನ ಯೌವನದ ಪತ್ನಿಯಲ್ಲಿ ಆನಂದಿಸು (ಕೀರ್ತ. 128:3). ಆದಕಾರಣ ಕ್ರೈಸ್ತ ವಿಶ್ವಾಸಿಗಳಾದವರು ಮದುವೆಯನ್ನು ಹಗುರವಾಗಿ ನೋಡಬಾರದು. ಒಂದು ವೇಳೆ ನಿನ್ನ ಗಂಡನಲ್ಲಿ ಅಥವಾ ಹೆಂಡತಿಯಲ್ಲಿ ಏನಾದರೂ ಕುಂದು ಕೊರತೆಗಳಿರುವುದಾದರೆ

1. ಮಕ್ಕಳಾಗದೇ ಇರುವುದು
2. ಕುಡುಕತನ
3. ಜಗಳ
4. ಮುಂಗೋಪ
5. ಅಕ್ರಮ ಸಂಬಂಧ
6. ಜೂಜು
7. ಕುಟುಂಬದ ಕಾಳಜಿ ಇಲ್ಲದೆ ಇರುವುದು
8. ಹೊಡೆಯುವುದು, ಬೈಯುವುದು
9. ಅಗೌರವ
10. ಸಮಯ ಕಳೆಯದಿರುವಿಕೆ ಇತ್ಯಾದಿ.

ನಾನು ನಿಮ್ಮ ಪಿತೃಗಳಿಗೆ ಅನುಗ್ರಹಿಸಿದ ದೇಶದಲ್ಲಿ ನೀವು ವಾಸಿಸುವಿರಿ (ಯೆರೆ. 36:28).

ಒಂದು ಸಲ ದೇವರ ಸಮ್ಮುಖದಲ್ಲಿ ನೀನು ಪ್ರಾರ್ಥಿಸು ಕರ್ತನ ಬಳಿಯಲ್ಲಿ ಇವರ ಬದಲಾವಣೆಗಾಗಿ ಮೊರೆಯಿಡು ಸತತವಾಗಿ ದೇವರನ್ನು ಕೂಗಿ ಕರೆ . ಕೀರ್ತ. 50:15 ಹೇಳುತ್ತದೆ, ಕಷ್ಟ ಕಾಲದಲ್ಲಿ ನನಗೆ ಮೊರೆಯಿಡಿರಿ ನಾನು ನಿಮ್ಮನ್ನು ಬಿಡಿಸುವೆನು. ಕ್ರೈಸ್ತ ವಿಶ್ವಾಸಿಗಳಿಗೆ ವಿವಾಹ ವಿಚ್ಛೇದನವೇ ಕೊನೆಯ ಪರಿಹಾರದ ಮಾರ್ಗವಲ್ಲ, ದೇವರ ಬಳಿಗೆ ಹೋಗಿ ಮೊರೆಯಿಡುವುದೇ ಪರಿಹಾರದ ಮಾರ್ಗ. ಯೋಬ. 19:25 ರಲ್ಲಿ ಯೋಬನು ನನ್ನ ವಿಮೋಚಕನು ಜೀವಸ್ವರೂಪನೆಂದು ಬಲ್ಲೆನು ಎಂದು ಹೇಳುತ್ತಾನೆ, ನನ್ನ ಪ್ರೀತಿಯ ಸಹೋದರ/ಸಹೋದರಿಯರೇ ನಿನ್ನ ಗಂಡನನ್ನು, ನಿನ್ನ ಹೆಂಡತಿಯನ್ನು ಬದಲಾಯಿಸುವ ಒಬ್ಬ ದೇವರು ನಿನಗಾಗಿ ಕಾರ್ಯಮಾಡಲು ಜೀವಿಸುತ್ತಾ ಇದ್ದಾನೆಂದು ಮರೆಯಬೇಡ. ಕೀರ್ತ. 65:2 ರಲ್ಲಿ ದಾವೀದನು ಪ್ರಾರ್ಥನೆಯನ್ನು ಕೇಳುವವನೇ ನರರೆಲ್ಲರೂ ನಿನ್ನ ಬಳಿಗೆ ಬರುವರು ಎಂದು ಪ್ರಾರ್ಥಿಸುತ್ತಾನೆ. ಇನ್ನು ಕಾಲ ಮಿಂಚಿಲ್ಲ ನೀನು ನಿನ್ನ ಸಂಗಾತಿಯ ಪರಿವರ್ತನೆಗಾಗಿ ಪ್ರಾರ್ಥಿಸುವುದಾದರೆ ಕರ್ತನು ನಿಶ್ಚಯವಾಗಿ ನಿನ್ನ ಸಂಗಾತಿಯನ್ನು ಬದಲಾಯಿಸುವನು ಹಾಗೂ ನಿನ್ನ ದಾಂಪತ್ಯ ಜೀವಿತವನ್ನು ಪುನರ್ ಸ್ಥಾಪಿಸುವನು.

**ಮುಂದುವರಿಯುವದು.........**

ಕರ್ತನ ಸೇವೆಯಲ್ಲಿ ಪ್ರಯಾಸಪಡುತ್ತಿರುವ ಮತ್ತು ನಿಮ್ಮೆಲ್ಲರ ಪ್ರೀತಿಗೆ ಪಾತ್ರಳಾದ ಕ್ರಿಸ್ತನ1ದಾಸಿಯಾದ,


**ಸಹೋ॥ ಎಲಿಜಬೆತ್ ಸುನಿಲ್ ಡಿ'ಸೋಜಾ.**




# ನಮ್ಮೊಂದಿಗೆ ಆಚರಿಸಿ



**ನಿಮ್ಮ ಹುಟ್ಟಿದ ದಿನ, ನಿಮ್ಮ ಮದುವೆ ದಿನ ನಿಮ್ಮ ಮಕ್ಕಳ ಹುಟ್ಟಿದ ದಿನ ಹಾಗೂ ನಿಮ್ಮ ನೆಚ್ಚಿನ ಗೆಳೆಯ/ಗೆಳತಿಯರ ಹುಟ್ಟಿದ ದಿನವನ್ನು ನಮ್ಮ ಅನಾಥಾಶ್ರಮದ ನಿವಾಸಿಗಳೊಂದಿಗೆ ಆಚರಿಸಲು ಬಯಸುವುದಾದರೆ ನಿಮ್ಮೆಲ್ಲರಿಗೂ ಸ್ವಾಗತ**



**ಹೆಚ್ಚಿನ ವಿವರಗಳಿಗಾಗಿ ನಮ್ಮನ್ನು ಸಂಪರ್ಕಿಸಿರಿ**

**ಮೊಬೈಲ್: 9902334941**

"ದಯಾದೃಷ್ಟಿಯವನು ಆಶೀರ್ವಾದವನ್ನು ಪಡೆಯುವನು;
ತನ್ನ ಅನ್ನವನ್ನು ಬಡವರಿಗೆ ಕೊಡುತ್ತಾನಲ್ಲವೆ." ಜ್ಞಾನೋಕ್ತಿ 22:9.

# ಪ್ರಾರ್ಥನಾ ಸ್ವರ

ನಿಮ್ಮ ಸಮಸ್ಯೆಗಳಿಗಾಗಿಯೂ, ನಿಮ್ಮ ತೊಂದರೆಗಳಿಗಾಗಿಯೂ, ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿಸಿ ಅಥವಾ ಕರೆ ಮಾಡಿ.

ನಮ್ಮ ಪ್ರಾರ್ಥನಾ ವೀರರು ನಿಮಗಾಗಿ ಕಣ್ಣೀರು ಸುರಿಸಿ ಪ್ರಾರ್ಥಿಸುವರು. ದೇವರು ಪ್ರಾರ್ಥನೆಯನ್ನು ಕೇಳಿ ಸದುತ್ತರವನ್ನು ಅನುಗ್ರಹಿಸಿ, ನಿಮ್ಮನ್ನು ನಿಮ್ಮ ಸಮಸ್ಯೆಯಿಂದ ಬಿಡಿಸುವನು.

ನಿಮ್ಮ ಪ್ರಾರ್ಥನಾ ಮನವಿಗಳನ್ನು, ನಿಮ್ಮ ವೈಯಕ್ತಿಕ ಸಮಸ್ಯೆಗಳನ್ನು ನಾವು ಗೋಪ್ಯವಾಗಿ ಇಡುತ್ತೇವೆ. ನಿಮ್ಮ ಪ್ರಶ್ನೆಗಳಿಗೆ ನಮ್ಮ ವಿಶೇಷ ಆಲೋಚಕರು ಉತ್ತರಿಸುತ್ತಾರೆ. ಹಾಗೂ ಅದನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. (ಬರಹಗಾರರ ಅನುಮತಿಯ ಮೇರೆಗೆ)

**24 ಗಂಟೆಗಳ ಪ್ರಾರ್ಥನೆಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : 0820 2559886**



## ಮಕ್ಕಳ ಸ್ವರ

1) ಹವ್ವ ಅಂದರೇನು? (ಆದಿ. 3:20).

2) ಅಬ್ರಹಾಮ ಯಾರನ್ನು ಮದುವೆಯಾದನು? (ಆದಿ. 17:15).

3) ಅಬ್ರಹಾಮನ ಸೇವಕನು ಇಸಾಕನಿಗೆ ಮದುವೆಮಾಡಲು ಹುಡುಕಿದ ಹುಡುಗಿ ಯಾರು? (ಆದಿ. 24:67).

4) ಯಾಕೋಬನು 14 ವರ್ಷ ಯಾರ ಕೈಕೆಳಗೆ ಕೆಲಸ ಮಾಡಿದನು? (ಆದಿ. 29:28).

5) ನೀನು ನನಗೆ ಒಂದು ಮಗುವನ್ನು ಕೊಟ್ಟರೆ ಅದನ್ನು ಸೇವೆಗಾಗಿ ಪ್ರತಿಷ್ಠಿಸುತ್ತೇನೆಂದು ಹೇಳಿದ ಸ್ತ್ರೀ ಯಾರು? (1 ಸಮು. 1:20)

6) ದಾವೀದನ ನಿಜವಾದ ಹೆಂಡತಿ ಯಾರು? (ಆದಿ. 18:26).

7) ಮೋಶೆಯನ್ನು ಮದುವೆಯಾದ ಸ್ತ್ರೀ ಯಾರು? (ವಿಮೋ. 2:21).

8) ಮೋಶೆಗೆ ಜನ್ಮ ನೀಡಿದವರು ಯಾರು ? (ವಿಮೋ. 6:20)

9) ಎಲೀಯ ಪ್ರವಾದಿಯನ್ನು ಕೊಲೆ ಮಾಡಲು ಬಯಸಿದ ಕ್ರೂರ ರಾಣಿ ಯಾರು? (1 ಅರಸು. 19:2).

---

### ಏಪ್ರಿಲ್ ತಿಂಗಳ ಮಕ್ಕಳ ಸ್ವರ ಸಂಚಿಕೆಯ ಉತ್ತರಗಳು :–

1. ಧರ್ಮಶಾಸ್ತ್ರವನ್ನು (ಕೀರ್ತ. 119:1).
2. ಭಾಗ್ಯವಂತರು (ಕೀರ್ತ. 119:2).
3. ಜಾಗರೂಕತೆಯಿಂದ (ಕೀರ್ತ. 119:4).
4. ಸ್ಥಿರಮನಸ್ಸುಳ್ಳವನಾಗಿದ್ದರೆ (ಕೀರ್ತ. 119:5).
5. ಆಶಾಭಂಗಪಡೆನು (ಕೀರ್ತ. 119:6).
6. ಕೊಂಡಾಡುತ್ತಾ (ಕೀರ್ತ. 119:7).
7. ಸಂಪೂರ್ಣವಾಗಿ (ಕೀರ್ತ. 119:8).
8. ನುಡಿಗನುಸಾರವಾಗಿ (ಕೀರ್ತ. 119:41).
9. ಮಿಥ್ಯಾಮಾರ್ಗವನ್ನು (ಕೀರ್ತ. 119:29).
10. ಅಂತರಾತ್ಮವನ್ನು (ಕೀರ್ತ. 119:32).

ಜಾಹೀರಾತು

"ನನ್ನ ತಂದೆಯ ಆಶೀರ್ವಾದ ಹೊಂದಿದವರೇ ಬನ್ನಿರಿ, ಲೋಕಾದಿಯಿಂದ ನಿಮಗೋಸ್ಕರ ಸಿದ್ಧಮಾಡಿದ ರಾಜ್ಯವನ್ನು ಸ್ವಾಸ್ತ್ಯವಾಗಿ ತೆಗೆದುಕೊಳ್ಳಿರಿ. ನಾನು ಹಸಿದಿದ್ದೆನು, ನನಗೆ ಊಟಕ್ಕೆ ಕೊಟ್ಟಿರಿ; ನಾನು ಬಾಯಾರಿದ್ದೆನು, ನನಗೆ ಕುಡಿಯುವದಕ್ಕೆ ಕೊಟ್ಟಿರಿ; ಪರದೇಶಿಯಾಗಿದ್ದೆನು, ನನ್ನನ್ನು ಸೇರಿಸಿಕೊಂಡಿರಿ; ಬಟ್ಟೆಯಿಲ್ಲದವನಾಗಿದ್ದೆನು, ನನಗೆ ಉಡುವದಕ್ಕೆ ಕೊಟ್ಟಿರಿ; ರೋಗದಲ್ಲಿ ಬಿದ್ದಿದ್ದೆನು, ನನ್ನನ್ನು ಆರೈಕೆ ಮಾಡುವದಕ್ಕೆ ಬಂದಿರಿ; ಸೆರೆಮನೆಯಲ್ಲಿದ್ದೆನು, ನನ್ನನ್ನು ನೋಡುವದಕ್ಕೆ ಬಂದಿರಿ ಎಂದು ಹೇಳುವನು" (ಮತ್ತಾ. 25:34–36).

**ಪ್ರತಿ ತಿಂಗಳು ವಿಶ್ವಾಸದಮನೆ ಅನಾಥಾಶ್ರಮಕ್ಕೆ ಅಕ್ಕಿ 25 ಕಿಲೋ. ದಿಂದ ಎಷ್ಟು ಸಾಧ್ಯವಿರುತ್ತದೋ ಅಷ್ಟು. ಅಕ್ಕಿಯನ್ನು ಕೊಡಬಯಸುವವರು ನಮಗೆ ಬೇಕಾಗಿದ್ದಾರೆ. ನೀವು ಕೊಡುವ ಅಕ್ಕಿಯಲ್ಲಿ ಕೆಲವರು ಊಟಮಾಡಿ ತೃಪ್ತರಾದಾಗ ಕರ್ತನು ಪರಲೋಕದಿಂದ ನಿಮ್ಮನ್ನು ಆಶೀರ್ವಾದ ಮಾಡುತ್ತಾನೆ.**

ನೀನು ನನಗೆ ಸಹಾಯಕನಾಗಿದ್ದೀಯಲ್ಲಾ; ನಿನ್ನ ರೆಕ್ಕೆಗಳ ಮರೆಯಲ್ಲಿ ಸುರಕ್ಷಿತನಾಗಿದ್ದುಕೊಂಡು ಆನಂದಘೋಷ ಮಾಡುತ್ತಿರುವೆನು (ಕೀರ್ತ. 63:7).